ಬೆಲೆ ರೂ.2.50
D.O.P - 15th of every month at Udupi Sorting Office



ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ಎ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-17 ಸಂಚಿಕೆ-11 ಪುಟಗಳು-12 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಶಾರದಾ ಮಂಟಪದಲ್ಲಿ ಸೌಂದರ್ಯ ಲಹರಿ ಸಪ್ತಾಹ





ತಾ. 08–10–2017ರಿಂದ 15–10–17ರ ತನಕ ಶ್ರೀಶಾರದ ದೇವಸ್ಥಾನ ಕುಂಜಿಬೆಟ್ಟುವಿನಲ್ಲಿ ಪ್ರತೀವರ್ಷದಂತೆ ಸೌಂದರ್ಯಲಹರೀ ಪಾರಾಯಣ ಸಪ್ತಾಹ ನೆರವೇರಿತು. ಶ್ರೀ ಶಂಕರಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಪಾರ್ವತೀದೇವಿಯನ್ನು ಸ್ತುತಿಸಿ ರಚಿಸಿದ ಈ ಸ್ತೋತ್ರದಲ್ಲಿ ನೂರು ಶ್ಲೋಕಗಳಿದ್ದು ಅದರ ಮೊದಲ 41 ಶ್ಲೋಕಗಳನ್ನು ಶ್ರೀಗಣೇಶನೇ ರಚಿಸಿದ್ದೆಂದು ನಂಬಿಕೆ

ಪ್ರತೀ ಮಂಗಳವಾರ ಶ್ರೀ ಶಾರದಾ ದೇವಸ್ಥಾನದಲ್ಲಿ ಸೌಂದರ್ಯಲಹರಿ ಸ್ತೋತ್ರದ ಪಠಣೆ ನಡೆಯುತ್ತದೆ. ಮಹಿಳಾವೇದಿಕೆಯ ಸದಸ್ಯೆಯರು, ಪರಿಸರದ ಭಕ್ತೆಯರು ಸುಮಾರು ಮೂವತ್ತು ಜನ ಸಂಜೆ ಐದು ಗಂಟೆಯಿಂದ ಅರು ಗಂಟೆಯ ತನಕ ಈ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಯಡತೊರೆ ಶ್ರೀ ಶ್ರೀ ಶಂಕರ ಭಾರತೀ ಸ್ವಾಮಿಜಿಯವರ ವಿಶೇಷ ಆಶೀರ್ವಾದದೊಂದಿಗೆ ಆರಂಭವಾಗಿರುವ ಈಕಾರ್ಯಕ್ರಮವು ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ವರ್ಷಕ್ಕೊಮ್ಮೆ ಸೌಂದರ್ಯಲಹರಿಯ ಸಪ್ತಾಹವನ್ನು ಕಳೆದ ಹತ್ತುವರ್ಷಗಳಿಂದ ಮಹಿಳಾ ವೇದಿಕೆಯವರು ನಡೆಸಿಕೊಂಡು ಬರುತ್ತಿದ್ದಾರೆ. ಈ ವರ್ಷದ ಸಪ್ತಾಹದ ಕೊನೆಯ ದಿನ ತಾ.15–10–2017ರ ಕಾರ್ಯಕ್ರಮದಲ್ಲಿ ಜ್ಞಾನಭಾರತಿಯ ಸದಸ್ಯರು ಸಹಾ ಪಾಲ್ಗೊಂಡಿದ್ದರು. ಸಂಜೆ 4 ಗಂಟೆಗೆ ದೇವಿಯ ಮುಂದೆ ರಂಗೋಲಿ ಬಿಡಿಸಿ ದೀಪಬೆಳಗಿಸಿ ಪಾರಾಯಣ ಆರಂಭಿಸಿದರು. ಸೌಂದರ್ಯಲಹರಿಯೊಂದಿಗೆ ಶ್ರೀ ಶಂಕರಾಚಾರ್ಯಅಷ್ಟೋತ್ತರಶತನಾಮಾವಳಿ ಪಾರಾಯಣವನ್ನೂ ಮಾಡಿದರು. ಪಾರಾಯಣದ ನಂತರ ದೇವಿಗೆ ಮಂಗಳಾರತಿ ಮಹಾಪೂಜೆ ನೆರವೇರಿತು.

## ಕೆ. ಗೋಪಾಲ್ ರಾವ್ ನಿಧನ



ನಮ್ಮ ಸಮಾಜದ ನಿವೃತ್ತ ಮುಖ್ಯ ಶಿಕ್ಷಕ, ಹಿರಿಯ ಸಾಹಿತಿ–ಪುತ್ತೂರು ತಾಲೂಕಿನ ಬಿಳಿನೆಲೆ ಗ್ರಾಮದ ಕೆ.ಗೋಪಾಲ್ ರಾವ್ (78) ಸೋಮವಾರ ನಿಧನರಾದರು.

ಅವರು ಮಕ್ಕಳ ಸಾಹಿತಿಯಾಗಿ, ನಾಟಕಕಾರರಾಗಿ, ಧಾರ್ಮಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಯಾಗಿದ್ದರು. 35 ವರ್ಷಗಳ

(3ನೇ ಪುಟಕ್ಕೆ...)

## ಸುರತ್ಕಲ್ ಸಂಘದ ಮಹಾಸಭೆ



ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಸುರತ್ಕಲ್ ಇಲ್ಲಿಯ 5ನೇ ವರ್ಷದ ಮಹಾಸಭೆಯು ಗೋವಿಂದದಾಸ ಕಾಲೇಜು, ಸುರತ್ಕಲ್‌ನ ಸಭಾಭವನದಲ್ಲಿ ದಿನಾಂಕ: 29.10.2017ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷರು ತಮ್ಮ ಸ್ವಾಗತ ಭಾಷಣದಲ್ಲಿ ತಿಳಿಸುತ್ತಾ ನಮ್ಮೀ ಸಂಘವು ಪ್ರಾರಂಭವಾಗಿ ನಾಲ್ಕು ವರ್ಷ ಪೂರ್ಣಗೊಳಿಸಿದ್ದು, ಸಂಘದ ಸದಸ್ಯರ ಸಹಕಾರದಿಂದ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜರುಗಿಸಲಾಯಿತು ಹಾಗೂ ಮುಂದೆಯೂ ಸಂಘದ ಸದಸ್ಯರು ಎಲ್ಲಾ ಕಾರ್ಯಕ್ರಮಗಳಿಗೆ ತನು–ಮನ–ಧನಗಳಿಂದ ಸಹಕರಿಸುವಂತೆ ಕೋರಿದರು. ಸಂಘದ ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮಾ ಇವರು ಸಂಘದ 2016–17ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ಕೋಶಾಧಿಕಾರಿಯಾದ ಶ್ರೀ ರಾಘವೇಂದ್ರ ರಾವ್ ಚಿತ್ರಾಪುರ ಇವರು 2016–17ನೇ ಸಾಲಿನ ಲೆಕ್ಕ ಪತ್ರದ ವರದಿಯನ್ನು ಸಭೆಯಲ್ಲಿ ತಿಳಿಸಿದರು ಹಾಗೂ ಸದರಿ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ವೇದಿಕೆಯಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಭವಾನಿಶಂಕರ್ ರಾವ್ ಮಲ್ಲಮಾರ್, ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ, ವಾಸುದೇವ ಶಾನುಭೋಗ್ ಹಾಗೂ ಸಂಘದ ಕಾರ್ಯದರ್ಶಿಯವರಾದ ಶ್ರೀ ಪಾಲಚಂದ್ರ ಶರ್ಮ, ಜೊತೆ ಕಾರ್ಯದರ್ಶಿಯವರಾದ ಶ್ರೀ ಶಿವಪ್ರಸಾದ್ ಶಾನುಭೋಗ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಹಾಗೂ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಸಂಕೇತ್ ಶಾನುಭೋಗ್ ಉಪಸ್ಥಿತರಿದ್ದರು. ನಂತರ ಕಾರ್ಕಳ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮಾ ಇವರ

(3ನೇ ಪುಟಕ್ಕೆ...)

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2018

**07-01-2018ನೇ ಆದಿತ್ಯವಾರದಂದು ನಡೆಯಲಿದೆ.**

ಆಸಕ್ತ ತಂಡಗಳು ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ವಸಂತ ರಾವ್ ಕರಂಬಳ್ಳಿ (M : 9632291183), ಉಂಡಾರು ಕೃಷ್ಣರಾಜ ರಾವ್ (M : 9164581333), ಕೆ. ಸುರೇಶ್ ರಾವ್, ಕುತ್ಪಾಡಿ (M : 9036443884) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ** ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ. ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

– ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

ಅದೇ ದಿನ ಬೆಳಿಗ್ಗೆ ಗಂಟೆ 9-00ರಿಂದ

ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ

**ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್**

**ಹಾಗೂ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು ಏರ್ಪಡಿಸಲಾಗಿದೆ.

– ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

## ಪ್ರವಾಸ :

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಯುವ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ತಾ.24-12-2017ರ ರವಿವಾರದಂದು ಮಂಡಗದ್ದೆ-ಸಕ್ರೆಬೈಲು-ಲಯನ್‌ಪಾರ್ಕ್-ರಾಮೇಶ್ವರ ದೇವಸ್ಥಾನ-ಗಾಜನೂರು ಅಣೆಕಟ್ಟು-ಕುಪ್ಪಳ್ಳಿ ಇತ್ಯಾದಿ ಸ್ಥಳಗಳಿಗೆ ಪ್ರವಾಸವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 6-30 ಗಂಟೆಗೆ ಶ್ರೀಶಾರದಾ ಮಂಟಪದಿಂದ ಹೊರಟು ಸಾಯಂಕಾಲ ವಾಪಾಸು ಬರಲಾಗುವುದು. ಪ್ರವಾಸ ಶುಲ್ಕ ಅಂದಾಜು ತಲಾ ರೂ.700/-.

ತಮ್ಮ ಹೆಸರುಗಳನ್ನು ತಾ.20-12-2017ರ ಮೊದಲು ಶ್ರೀಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ (0820-2520754), ಯುವ ವೇದಿಕೆಯ ಅಧ್ಯಕ್ಷ ಶ್ರೀ ಕೃಷ್ಣರಾಜ ರಾವ್ ಉಂಡಾರು (9164581333) ಅಥವಾ ಸಂಚಾಲಕ ಶ್ರೀ ವಸಂತರಾವ್ ಕರಂಬಳ್ಳಿ (9632291183) ಇವರಲ್ಲಿ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

# ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

ಸುದ್ದಿಯನ್ನು ತಿಳಿಯಲು ಹಾಗೂ ಪ್ರಚಾರ ಪಡಿಸಲು ವಾರ್ತಾಪತ್ರಿಕೆಗಳು ಮಾತ್ರ ಇದ್ದ ಕಾಲವೊಂದಿತ್ತು. ಊರ ಸುತ್ತೆಲ್ಲಾ ಸುದ್ದಿ ಹಬ್ಬಿಸುವುದಕ್ಕೋ ಏನೋ ವೃತ್ತಪತ್ರಿಕೆಗಳು ಎಂದೂ ಕರೆಯುತ್ತೇವೆ. ಅನಂತರ ದೂರದರ್ಶನದಲ್ಲಿ ವಾರ್ತಾಪ್ರಸಾರ ಆರಂಭವಾದ ಮೇಲೆ ಸುದ್ದಿಗಳಿಗೆ ದೃಶ್ಯದ ಆಯಾಮ ಸಿಕ್ಕಿತು. ಟಿ.ವಿ. ಚಾನೆಲುಗಳ ಸಂಖ್ಯೆ ಹೆಚ್ಚಾದಂತೆ ದಿನವಿಡೀ ಸುದ್ದಿ ಪ್ರಸಾರ ಮಾಡುವ ಚಾನೆಲುಗಳು ಈಗಿವೆ. ತಾಜಾ ಸುದ್ದಿ ಮಾತ್ರವಲ್ಲ, ನೇರ ಪ್ರಸಾರ(ಲೈವ್)ಮಾಡಲು ಚಾನೆಲುಗಳ ಮಧ್ಯೆ ಸ್ಪರ್ಧೆಯಿದೆ. ಆಮೇಲೆ ಆರಂಭವಾದದ್ದು ಸಾಮಾಜಿಕ ಜಾಲತಾಣಗಳ ಯುಗ. ಅದರಲ್ಲಿ ಮೊದಲನೆಯದು ಫೇಸ್‌ಬುಕ್. ನಂತರ ಬಂದ ವಾಟ್ಸಾಪ್‌ನಿಂದ ಫೇಸ್‌ಬುಕ್‌ನ ಜನಪ್ರಿಯತೆ ಸ್ವಲ್ಪ ಮಂಕಾಯಿತೆಂದು ತೋರುತ್ತದೆ. ವಾಟ್ಸಾಪ್‌ನಲ್ಲಿ ಗುಂಪಿನಲ್ಲಿ ಕಳುಹಿಸುವ ಮೆಸೇಜುಗಳು ಫೇಸ್‌ಬುಕ್ಕಿನಂತೆ ಜಗಜ್ಜಾಹೀರಾಗುವುದಿಲ್ಲ. ಇದರಲ್ಲಿ ನಮಗೆ ಬೇಕಾದವರನ್ನು ಮಾತ್ರ ಗುಂಪಿಗೆ ತೆಗೆದುಕೊಂಡು ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಮೆಸೇಜು ಕಳುಹಿಸುವಾಗ ಸಾಮಾನ್ಯ ಶಿಸ್ತನ್ನು ಪಾಲಿಸುತ್ತಾ ಗುಂಪಿನ ಮನೋಸ್ಥಿತಿಗೆ ಹೊಂದುವ ಮೇಸೇಜುಗಳನ್ನು ಕಳುಹಿಸುತ್ತಾ ಇದ್ದರೆ ಇದೊಂದು ಅತ್ಯುತ್ತಮ ಸಂವಹನ ಮಾಧ್ಯಮ.

ಇದೆಲ್ಲವನ್ನು ಬರೆಯಲು ಕಾರಣ ವೈದ್ಯರಲ್ಲಿ ಇತ್ತೀಚೆಗೆ ಆರಂಭವಾದ “ವಿಪ್ರವೈದ್ಯ” ಎಂಬ ವಾಟ್ಸಾಪ್ ಗುಂಪು. ಯುವಕರು ಜಾತಿ ಆಧಾರಿತ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವುದು ಸ್ಥಾನಿಕರಲ್ಲಿ ಮಾತ್ರವಲ್ಲಾ ಇತರ ಬ್ರಾಹ್ಮಣ ಪಂಗಡಗಳಲ್ಲೂ ಕಡಿಮೆಯಾಗುತ್ತಿದೆ. ಇಂತಹಾ ಸಂಘಟನೆಯ ಕಾರ್ಯಕ್ರಮಕ್ಕೆ ಒಂದೇ ಜಾತಿಯವರು ಎಂಬ ಕಾರಣಕ್ಕೆ ನಾವೇಕೆ ಅಷ್ಟು ದೂರ ಹೋಗಬೇಕು. ಸಿಗುವ ಒಂದೇಒಂದು ವಾರದ ರಜೆಯನ್ನು ವ್ಯರ್ಥ ಮಾಡಬೇಕೇ? ಅಷ್ಟಕ್ಕೂ ಮಿಗಿಲಾಗಿ ಅಲ್ಲಿರುವವರು ನಮಗೆ ಅಪರಿಚಿತರು, ಅಲ್ಲಿ ಚರ್ಚೆಯಾಗುವ ವಿಷಯಕ್ಕೂ ನಮಗೂ ಹೆಚ್ಚಿನ ಬಾರಿ ಸಂಬಂಧವಿರುವುದಿಲ್ಲ ಇದೆಲ್ಲಾ ಯುವಪೀಳಿಗೆಯವರು ನಮ್ಮಜಾತಿ ಆಧಾರಿತ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸದಿರುವುದಕ್ಕೆ ಕೊಡುವ ಕಾರಣಗಳು. ವೃತ್ತಿ ಆಧಾರಿತ ಗುಂಪುಗಳಲ್ಲಿ ವಿಚಾರವಿನಿಮಯಕ್ಕೆ ಹಾಗೂ ಚರ್ಚೆಯ ವಿಷಯಗಳಲ್ಲಿ ಹೊಂದಾಣಿಕೆ ಇರುತ್ತದೆ ಹಾಗಾಗಿ ಸದಸ್ಯರಲ್ಲಿ ಭಾಗವಹಿಸಲು ಆಸಕ್ತಿ ಮೂಡಿಸುತ್ತದೆ. ಬ್ರಾಹ್ಮಣ್ಯವೂ ಒಂದು ಕಾಲದಲ್ಲಿ ವೃತ್ತಿ ಆಧಾರಿತ ಗುಂಪೇ ಆಗಿತ್ತು ತಾನೆ? "ವಿಪ್ರವೈದ್ಯ"ದಂತಹಾ ವೃತ್ತಿ ಹಾಗೂ ಜಾತಿ ಆಧಾರಿತ ಗುಂಪುಗಳಿಂದಾಗಿ ಬ್ರಾಹ್ಮಣ ಸಂಘಟನೆಯೊಳಗೆ ಪರಸ್ಪರ ಸಂವಹನೆ , ಪರಿಚಯ ಹೆಚ್ಚಾಗುತ್ತದೆ. ಸಂಸ್ಕೃತಿಯ ರಕ್ಷಣೆಯೂ ಆಗುತ್ತದೆ. ಸಂಕುಚಿತ ಭಾವನೆ ಕಡಿಮೆಯಾಗಿ ಜಾತಿ ದ್ವೇಷ ತಗ್ಗುತ್ತದೆ ಎಂಬುದು ನಮ್ಮ ಭಾವನೆ. ಈ ನಿಟ್ಟಿನಲ್ಲಿ ಈಗಷ್ಟೇ ಜನ್ಮತಾಳಿರುವ ವಿಪ್ರವೈದ್ಯ ಯಶಸ್ಸನ್ನು ಕಾಣಲಿ, ಅಂತೆಯೇ ವೃತ್ತಿ ಆಧಾರಿತ ಇನ್ನಷ್ಟು ಬ್ರಾಹ್ಮಣ ಗುಂಪುಗಳು ಬರಲಿ ಬ್ರಾಹ್ಮಣರ ಶಕ್ತಿ ಇನ್ನಷ್ಟು ವೃದ್ಧಿಸಲಿ ಎಂದು ಆಶಿಸುತ್ತೇವೆ.

**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

**ಓದುಗರಿಗೆ ಶ್ರೀ ಸುಬ್ರಹ್ಮಣ್ಯ ಷಷ್ಠಿಯ ಶುಭಾಶಯಗಳು**

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-27

## ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಕರ್ವಾಲು, ಕಾರ್ಕಳ





ಉಡುಪಿ ಕಾರ್ಕಳ ರಸ್ತೆಯಲ್ಲಿ 16 ಮೈಲು ಸಾಗಿ ನೀರೆ ಬೈಲೂರಿನಿಂದ ಉತ್ತರಕ್ಕೆ ತಿರುಗಿ ಗೋವಿಂದೂರು ಮಾರ್ಗವಾಗಿ 8 ಕಿಲೋಮೀಟರ್ ದೂರದಲ್ಲಿ ಕರ್ವಾಲು ದೇವಾಲಯ ಸಿಗುತ್ತದೆ.

ಪ್ರಾಚೀನದಿಂದಲೂ ನಮ್ಮವರ ಆಡಳಿತಕ್ಕೆ ಸೇರಿತ್ತು ಎಂಬುದು ಜನಪದದ ವ್ಯಾಖ್ಯೆ. ಸುಮಾರು 4–5 ತಲೆಮಾರುಗಳಿಂದ ಸಿಗುವ ವಿವರದಂತೆ ನಮ್ಮರೇ ಈ ದೇವಾಲಯದ ಆಡಳಿತ ಮೊಕ್ತೇಸರರಾಗಿ ಕಾರ್ಯನಿರ್ವಹಿಸಿದ್ದು ದೇವಾಲಯದ ನಿರ್ವಹಣೆಯು ನಮ್ಮವರ 4 ಮನೆಗಳಿಂದ ವಾರ್ಷಿಕ ಪರ್ಯಾಯ ಕ್ರಮದಲ್ಲಿ ನಡೆದುಬರುತ್ತಿತ್ತು , ಇದು ಈಗಲೂ ಹೀಗೆ ನಡೆದುಬರುತ್ತಿದೆ. ಮೊಕ್ತೇಸರ ಪದವಿ ಅನುವಂಶಿಕವಾಗಿ ಸಾಗಿ ಬಂದಿದೆ.

ದೇವಾಲಯದ ಪ್ರಧಾನ ದೇವರು ಶ್ರೀ ವಿಷ್ಣುಮೂರ್ತಿ. 1972ರಲ್ಲಿ ದೇವಾಲಯಕ್ಕೆ ಭೇಟಿ ನೀಡಿದ್ದ ಪ್ರಾಚ್ಯ ಶಾಸ್ತ್ರಜ್ಞ ಡಿ| ಗುರುರಾಜ ಭಟ್ಟರ ಅಭಿಪ್ರಾಯದಂತೆ ಈ ದೇವಾಲಯವು ಪಲ್ಲವರಸರ ಕಾಲಕ್ಕೆ ಸಂಬಂಧಿಸಿದ್ದು. ಇದಕ್ಕೆ ಸುಮಾರು 1200 ವರ್ಷಗಳ ಇತಿಹಾಸವಿದೆ. ವಿಷ್ಣುಮೂರ್ತಿ ದೇವರ ಸುಂದರ ವಿಗ್ರಹ, ಪೀಠ ಸೇರಿ 5 ಅಡಿಗಳ ಎತ್ತರವಿದ್ದು ಭವ್ಯವಾಗಿದೆ. ಬಿಂಬದ ಉತ್ತರೀಯ ಹಾದು ಹೋಗುವ ರೀತಿ, ಬಿಂಬದ ಕಿರೀಟ ಮತ್ತು ಹಿಂಬದಿಯ ಜಟಾಭಾರ ಇವು ಪಲ್ಲವ ಶೈಲಿಯ ಕೆತ್ತನೆಯನ್ನು ದೃಢೀಕರಿಸುತ್ತವೆ ಎಂದು ಅವರ ಅಭಿಪ್ರಾಯ. ಮಾತ್ರವಲ್ಲ, ಇದು ಜನಾರ್ದನ ರೂಪೀ ವಿಷ್ಣುದೇವರು ಎಂಬುದು ಅವರ ಹೇಳಿಕೆ.

ಜೀರ್ಣೋದ್ಧಾರ ಪೂರ್ವದಲ್ಲಿ ದೇವಾಲಯದ ಆಗ್ನೇಯ ಭಾಗದಲ್ಲಿ ಲಿಂಗರೂಪದ ಒಂದು ಬಿಂಬವಿತ್ತು. ಇದನ್ನು ದುರ್ಗೆ ಎಂದು ಆರಾಧಿಸುತ್ತಿದ್ದರು. ಈಗ ಲಿಂಗವನ್ನು ದೇವರ ಎಡಭಾಗದಲ್ಲಿ (ಎಡ ಪೌಳಿಯ ಪಶ್ಚಿಮ ದಿಕ್ಕಿನಲ್ಲಿ) ಪ್ರತ್ಯೇಕ ಗುಡಿಯಲ್ಲಿ ಸ್ಥಾಪಿಸಲಾಗಿದೆ. ಇದೇ ಕಾರಣವಾಗಿ ಇಲ್ಲಿ ಉತ್ಸವ ಸಂದರ್ಭದಲ್ಲಿ ಹಾಗೂ ವರ್ಷದುದ್ದಕ್ಕೆ ಚಂಡಿಕಾಹೋಮಗಳೂ ನಡೆಯುತ್ತಿರುತ್ತವೆ. ದೇವರ ಎಡಭಾಗದಲ್ಲಿ ಮಹಾಗಣಪತಿಯ ಗುಡಿಯಿದೆ. (ಬಲಪೌಳಿಯ ಪಶ್ಚಿಮ ಮೂಲೆಯಲ್ಲಿ).

1982ರ ವರೆಗೆ ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದು ಕೇವಲ ದೈನಂದಿನ ಪೂಜೆ ಹಾಗೂ ವಾರ್ಷಿಕ ಒಂದೆರಡು ವಿಶೇಷ ಕಾರ್ಯಕ್ರಮಗಳು ನಡೆಯುತ್ತಿದ್ದವು. ಪೂಜೆಯ ಕೆಲಸವನ್ನು ಶಿವಳ್ಳಿ ಬ್ರಾಹ್ಮಣರು ಮಾಡುತ್ತಿದ್ದಾರೆ. ಅನುವಂಶಿಕ ತಂತ್ರಿಗಳ ಒಂದು ಕುಟುಂಬ ಸಮೀಪದ ನೀರೆ ಬೈಲೂರಿನಲ್ಲಿದೆ. ದೇವಾಲಯದ ಜೀರ್ಣೋದ್ಧಾರ ಕನಸುಕಂಡ ಮೊಕ್ತೇಸರ ವರ್ಗದ ಕರ್ವಾಲು ಸೋಮಶೇಖರ ರಾಯರ ಮುತುವರ್ಜಿಯಿಂದ 1982ರಲ್ಲಿ ಊರವರನ್ನು ಆಮಂತ್ರಿಸಿ ಆರಂಭವಾದ ಜೀರ್ಣೋದ್ಧಾರ ಸಮಿತಿ, 1988ರಲ್ಲಿ ರೂಪುಗೊಂಡ ಬ್ರಹ್ಮಕಲಶೋತ್ಸವ ಸಮಿತಿಗಳ ಮೂಲಕ ಮರು ನಿರ್ಮಾಣದ ಕೆಲಸ ಸಾಗಿ 1989ರಲ್ಲಿ ಶ್ರೀ ಮಹಾವಿಷ್ಣುಮೂರ್ತಿ ಹಾಗೂ ಪರಿವಾರ ದೇವರುಗಳ ಪ್ರತಿಷ್ಠಾ ಕಾರ್ಯ ನೆರವೇರಿತು.

ದೇವಾಲಯದ ಧ್ವಜಸ್ತಂಭ ಸ್ಥಾಪನೆಯಾದದ್ದು ಕೆಲಕಾಲದ ನಂತರ. ಸುಮಾರು 17–18ನೆಯ ಶತಮಾನದಲ್ಲಿ ಇಲ್ಲಿಯೂ ಬಾಹ್ಯಪ್ರೇರಿತ ಜಾತಿ–ತತ್ವ ಸಂಘರ್ಷಗಳು ನಡೆದು ಮೊಕ್ತೇಸರ ವರ್ಗದವರೊಬ್ಬರು ಹಿಂದೆ ಇದ್ದ ಧ್ವಜಸ್ತಂಭವನ್ನು ಕಡಿದು ಹಾಕಿದ್ದರಂತೆ. ಈಗಿನ ಧ್ವಜಸ್ತಂಭ ಸುಮಾರು 1992ರ ಆಚೆಗೆ ಸ್ಥಾಪನೆಯಾದುದಾಗಿದೆ. ಈಗ ಪ್ರತಿ ವರ್ಷ ನಾಲ್ಕುದಿನಗಳ ಕಾಲ ಉತ್ಸವ, ವರ್ಷದುದ್ದಕ್ಕೂ ಹರಕೆಯ ಆಶ್ಲೇಷಾ ಬಲಿ ಸೇವೆ, ಚಂಡಿಕಾಹೋಮ, ಗಣಹೋಮ, ಕುಂಕುಮಾರ್ಚನೆ, ಹಾಲುಪಾಯಸ ಸೇವೆ, ಹೂವಿನ ಪೂಜೆ ನಡೆಯುತ್ತಿರುತ್ತದೆ. ಕರ್ವಾಲು ಕುಟುಂಬದಲ್ಲಿ ಇಂದಿನ ಸುಮಾರು 8 ತಲೆಮಾರುಗಳ ಹಿಂದೆ ಇನ್ನ , ಕೆಮ್ಮಣ್ಣು, ಬೆಳ್ಮಣ್ ಮೊದಲಾದ ಊರುಗಳಿಗೆ ಅನೇಕ ಕವಲುಗಳು ವಲಸೆ ಹೋಗಿದ್ದು ಇಂದಿಗೂ ನಿರಂತರವಾಗಿ ದೇವಾಲಯಕ್ಕೆ ಬಂದು ಸೇವೆ ಸಲ್ಲಿಸುತ್ತಾರೆ. ಭಾರತ ಕ್ರಿಕೆಟ್ ತಂಡದ ಪ್ರಸಕ್ತ ಪ್ರಧಾನ ಕೋಚ್ ಶ್ರೀ ರವಿಶಾಸ್ತ್ರಿಯವರು ಮೂಲತಃ ಕರ್ವಾಲು ಮನೆತನಕ್ಕೆ ಸೇರಿದವರಾಗಿದ್ದು ಈಗ ಪ್ರತಿವರ್ಷ ದೇಗುಲಕ್ಕೆ ಭೇಟಿ ನೀಡಿ ದೇವರ ಮೂಲನಾಗಸೇವೆ ಸಲ್ಲಿಸುತ್ತಾರೆ.

ದೇವಸ್ಥಾನದ ಪೂರ್ವ ಪೌಳಿಯ ಬಲಭಾಗದಲ್ಲಿ ದೇವರ ಬಂದ ಮುಂಡಿತ್ತಾಯ ದೈವದ ಸನ್ನಿಧಾನವಿದೆ. ಇಲ್ಲಿ ನಾಗದೇವರಿಗೆ ಸೇವೆ ಸಲ್ಲಿಸಲು ದೂರದೂರುಗಳಿಂದ ಭಕ್ತಾಧಿಗಳು ಆಗಮಿಸುತ್ತಾರೆ.

ಪ್ರಸಕ್ತ ಶ್ರೀ ಕರ್ವಾಲು ಅನಂತಪಟ್ಟಾಭಿರಾಯರು ಆಡಳಿತ ಮೊಕ್ತೇಸರರಾಗಿದ್ದು, ದೇವಾಲಯದ ಅಭಿವೃದ್ಧಿ ಮಂಡಳಿ ಹಾಗೂ ಊರವರು ಎಲ್ಲಾ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. 2018ರ ವಾರ್ಷಿಕ ಉತ್ಸವ ತಾ.23ರಿಂದ 26ರ ವರೆಗೆ ಜನವರಿ ತಿಂಗಳಲ್ಲಿ ನಡೆಯಲಿದೆ.

ಸಂಪರ್ಕ ದೂರವಾಣಿ : 9900127267 (ಆಡಳಿತ ಮೊಕ್ತೇಸರರು)

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್ , ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | |
|---|---|
| ವಾಹನ ಸಾಲ | : 12% |
| ಹಳೆಯ ವಾಹನ | : 13.5% |
| ಆಭರಣ ಸಾಲ | : 12% |
| ವೈಯಕ್ತಿಕ ಸಾಲ | : 16% |
| ಶಿಕ್ಷಣ ಸಾಲ | : 12% |
| ಅಡಮಾನ ಸಾಲ | : 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010–11 ರಿಂದ 2015–16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**

Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging



## ಕೆ. ಗೋಪಾಲ್ ರಾವ್ ನಿಧನ

...1ನೇ ಪುಟದಿಂದ

ಕಾಲ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ರಾಜ್ಯಸರಕಾರ ಕೊಡಮಾಡುವ ತಾಲೂಕು ಮಟ್ಟದ, ಜಿಲ್ಲಾ ಮಟ್ಟದ ಹಾಗೂ ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದರು. ಇವರು ಗೋರಾಕೆ ಎಂಬ ಕಾವ್ಯ ನಾಮದೊಂದಿಗೆ ದೇವಲೋಕದಲ್ಲಿ ಚುನಾವಣೆ, ಭಕ್ತಾಂಜಲಿ, ಸುಪ್ರಭಾತ, ಬಾಲಗೋಪಾಲ ವಚನಗಳು ಸೇರಿದಂತೆ 16ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದರು. ನಾಟಕಕಾರರಾಗಿಯೂ ಪರಿಚಿತರಾಗಿದ್ದರು. ಧಾರ್ಮಿಕ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿದ್ದ ಅವರು, ವಲಯದ ಹತ್ತಾರು ದೇವಸ್ಥಾನಗಳ ಆಡಳಿತ ಮೊಕ್ತೇಸರರಾಗಿ, ಜೀರ್ಣೋದ್ಧಾರ, ಬ್ರಹ್ಮಕಲಶೋತ್ಸವಗಳನ್ನು ನೆರವೇರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇವರ ಧಾರ್ಮಿಕ ಸೇವೆಗೆ ಧಾರವಾಡದಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ, ಬೆಂಗಳೂರು ಕನ್ನಡ ಹಾಗೂ ಅಭಿವೃದ್ಧಿ ಸಮಿತಿಯವರಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಸಮಾಜ ಸೇವೆಗೆ ಕರ್ಮಯೋಗಿ ಪ್ರಶಸ್ತಿ, ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ತಾಲೂಕು ಮಟ್ಟದ ಪ್ರಶಸ್ತಿ ಪಡೆದಿದ್ದಾರೆ. ಇವರ ವಿವಿಧ ಸೇವೆಯನ್ನು ಪರಿಗಣಿಸಿ ಸುಮಾರು 33 ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿದ್ದರು. ಸುಮಾರು ಹದಿನೈದಕ್ಕೂ ಹೆಚ್ಚು ಸ್ಮರಣ ಸಂಚಿಕೆಗಳಿಗೆ ಪ್ರಧಾನ ಸಂಪಾದಕರಾಗಿ ದುಡಿದ ಹೆಗ್ಗಳಿಕೆ ಇವರದ್ದಾಗಿತ್ತು. ಮಾತ್ರವಲ್ಲದೆ ಧರ್ಮಸ್ಥಳ ಧರ್ಮಾಧಿಕಾರಿ ಡಾ। ಡಿ.ವೀರೇಂದ್ರ ಹೆಗ್ಗಡೆ ಸೇರಿದಂತೆ ವಿವಿಧ ಮಠಾಧೀಶರುಗಳಿಂದ ಸನ್ಮಾನ ಪಡೆದಿದ್ದರು.

ಶ್ರೀ ಗೋಪಾಲರಾಯರು ಶ್ರೀಶಾರದಾ ಪತ್ರಿಕೆಯ ಅಭಿಮಾನಿಯಾಗಿದ್ದು, ನಿರಂತರವಾಗಿ ತನ್ನ ಲೇಖನ ಹಾಗೂ ಕವನಗಳನ್ನು ಕಳುಹಿಸಿ ಪ್ರೋತ್ಸಾಹಿಸಿದ್ದಾರೆ. ಅವರು ನಮ್ಮ ಸಮಾಜದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದು, ಉಡುಪಿಯಲ್ಲಿ ಜರಗಿದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ನಮ್ಮವರ ಆಡಳಿತದಲ್ಲಿರುವ ಎಲ್ಲಾ ದೇವಸ್ಥಾನಗಳ ಪಟ್ಟಿಯನ್ನು ತಯಾರಿಸಿ ಪ್ರಕಟಿಸಿದ್ದರು. ಹಾಗೂ ಈ ಎಲ್ಲಾ ದೇವಸ್ಥಾನಗಳ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಪನ್ಯಾಸವನ್ನು ನೀಡಿದ್ದರು. ಶ್ರೀಯುತರು ಪತ್ನಿ, ಇಬ್ಬರು ಪುತ್ರರು ಹಾಗೂ ಒಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಶ್ರೀ ಗೋಪಾಲರಾಯರ ಆತ್ಮಕ್ಕೆ ಭಗವಂತನು ಪರಮಸಾಯುಜ್ಯವನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

## ಕೃಷ್ಣಕುಮಾರ್ ಮಟ್ಟು ಇವರಿಗೆ ಟಿ.ವಿ.ರಾವ್ ಪ್ರಶಸ್ತಿ



ಕೃಷ್ಣಕುಮಾರ್ ಮಟ್ಟು, ನಿವೃತ್ತ ಅಧ್ಯಾಪಕರು, ಹವ್ಯಾಸಿ ಯಕ್ಷಗಾನ ಕಲಾವಿದ. ಇವರು ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಗೌರವಾರ್ಥ ಆಯೋಜಿಸಿದ್ದ ಚಿಟ್ಟಾಣಿ ಸಪ್ತಾಹ ಕಾರ್ಯಕ್ರಮದಲ್ಲಿ ಶ್ರೀ ಟಿ.ವಿ.ರಾವ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶ್ರೀಯುತರು ಆರಂಭದಲ್ಲಿ ಯಕ್ಷಗಾನ ಹಿಮ್ಮೇಳವಾದನ ಅಭ್ಯಾಸ ಮಾಡಿದರು. ಗುರು ಬನ್ನಂಜೆ ಸಂಜೀವ ಸುವರ್ಣರಲ್ಲಿ ಹೆಜ್ಜೆಗಾರಿಕೆ ಕಲಿತುಕೊಂಡರು. ಟಿ.ವಿ.ರಾವ್ ನೇತೃತ್ವದ ಮಟ್ಟು ವಿಷ್ಣುಮೂರ್ತಿ ಯಕ್ಷಗಾನ ಸಂಘ, ಕಟಪಾಡಿ ಮಂಜುಳಾ ಯಕ್ಷಗಾನ ಸಂಘಗಳಲ್ಲಿ ಖಾಯಂ ಸದಸ್ಯರು. ಹಿಮ್ಮೇಳವಾದಕರಾಗಿ, ವೇಷಧಾರಿಯಾಗಿ, ಅರ್ಥಧಾರಿಯಾಗಿ ಹಲವು ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಅಲ್ಲಿಯ ಹಿರಿಯ ಕಲಾವಿದರ ಒಡನಾಟದಲ್ಲಿ ಕಲೆಯ ಕಸುಬುಗಾರಿಕೆ ಬೆಳೆಸಿಕೊಂಡಿದ್ದಾರೆ. ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾ ಸಂಘದಲ್ಲಿ ಪ್ರಧಾನ ವೇಷಧಾರಿಯಾಗಿ ಹಲವು ಮುಖ್ಯಪಾತ್ರಗಳನ್ನು ನಿರ್ವಹಿಸಿದ್ದಾರೆ. ಕುಂಜಾರುಗಿರಿ, ಕಟಪಾಡಿ, ಅದಮಾರುಗಳಲ್ಲಿ ಯಕ್ಷಗಾನ ತರಬೇತಿ ನೀಡಿ ಮಕ್ಕಳಿಂದ ಹಾಗೂ ಮಹಿಳೆಯರಿಂದ ಯಕ್ಷಗಾನ ಮಾಡಿಸಿದ್ದಾರೆ. ಯಕ್ಷಗಾನದ ಎಲ್ಲ ಅಂಗಗಳ ಪರಿಚಯವಿರುವ ಇವರು ಟಿ.ವಿ.ರಾವ್ ಅವರ ಆತ್ಮೀಯರಲ್ಲಿ ಓರ್ವರಾಗಿದ್ದರು. ಶ್ರೀ ಕೃಷ್ಣಕುಮಾರ್ ಮಟ್ಟು ಅವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಹೃತ್ಪೂರ್ವಕ ಅಭಿನಂದನೆಗಳು.

## ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆ



ಉಡುಪಿಯ ಮಾಸ್ಟರ್ಸ್ ಅತ್ಲೆಟಿಕ್ಸ್ ಎಸೋಸಿಯೇಶನ್ ಆಶ್ರಯದಲ್ಲಿ ಇತ್ತೀಚೆಗೆ ಉಡುಪಿಯಲ್ಲಿ ನಡೆದಿದ್ದ ಕ್ರೀಡಾಕೂಟದಲ್ಲಿ 65 ವರ್ಷದ ಹಿರಿಯರ ವಿಭಾಗದಲ್ಲಿ ಸ್ಪರ್ಧಿಸಿದ್ದ ಎರ್ಮಾಳಿನ ವೈ.ಕುಮಾರಸ್ವಾಮಿ ಅವರು 400 ಮೀಟರ್ ಓಟದಲ್ಲಿ ಬೆಳ್ಳಿ ಹಾಗೂ ಡಿಸ್ಕಸ್ ಹಾಗೂ ಶಾಟ್‌ಪುಟ್ ಎಸೆತಗಳಲ್ಲಿ ಚಿನ್ನದ ಪದಕಗಳನ್ನು ಗಳಿಸಿ ಮುಂದಿನ ಡಿಸೆಂಬರ್‌ನಲ್ಲಿ ಹೊಸಕೋಟೆಯಲ್ಲಿ ನಡೆಯಲಿರುವ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ. ವೈ.ಕುಮಾರಸ್ವಾಮಿ ಈ ಹಿಂದೆ ಅನೇಕ ಅಂತಾರಾಷ್ಟ್ರೀಯ ಮಟ್ಟದ ಮಾಸ್ಟರ್ಸ್ ಅತ್ಲೆಟಿಕ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಚಿನ್ನದ ಪದಕಗಳನ್ನು ಗಳಿಸಿರುತ್ತಾರೆ.

## ಸುರತ್ಕಲ್ ಸಂಘದ ಮಹಾಸಭೆ

...1ನೇ ಪುಟದಿಂದ

ಉಪಸ್ಥಿತಿಯಲ್ಲಿ 2017–19ನೇ ಸಾಲಿನ ಹೊಸ ಕಾರ್ಯಕಾರಿ ಸಮಿತಿಯನ್ನು ಪುನರ್ ರಚಿಸಲಾಯಿತು. ಸಂಘದ ಅಧ್ಯಕ್ಷರಾಗಿ ಶ್ರೀ ಕೆ. ಮಾಧವ ರಾವ್, ಉಪಾಧ್ಯಕ್ಷರಾಗಿ ಶ್ರೀ ಗೋಪಾಲಕೃಷ್ಣ ಹಾಗೂ ಶ್ರೀ ವಾಸುದೇವ ಶಾನುಭೋಗ್, ಕಾರ್ಯದರ್ಶಿಯವರಾಗಿ ಪಾಲಚಂದ್ರ ಶರ್ಮ, ಜೊತೆ ಕಾರ್ಯದರ್ಶಿಯವರಾಗಿ ಶ್ರೀ ಶಿವಪ್ರಸಾದ್ ಶಾನುಭೋಗ್, ಶ್ರೀ ಪ್ರವೀಣ್ ಕುಮಾರ್ ಮಲ್ಲಮಾರ್ ಹಾಗೂ ಶ್ರೀ ಸುಕುಮಾರ್, ಕೋಶಾಧಿಕಾರಿಯಾಗಿ ಶ್ರೀ ರಾಘವೇಂದ್ರ ರಾವ್ ಇವರು ಮುಂದುವರಿದರು. ಹೊಸ ಕಾರ್ಯಕಾರಿ ಸಮಿತಿ ಪುನರ್ ರಚನೆ ಮಾಡಿರುವ ಕಾರ್ಕಳ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮಾ ಇವರಿಗೆ ಸಂಘದ ಅಧ್ಯಕ್ಷರು ಕೃತಜ್ಞತೆಯನ್ನು ಸಲ್ಲಿಸಿದರು.

ನಂತರ ನಮ್ಮ ಸಮಾಜದ ಹಿರಿಯ ಸಾಧಕರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಸಂಸ್ಕೃತ ಪ್ರಾಧ್ಯಾಪಕರು ಗೋವಿಂದದಾಸ ಕಾಲೇಜು ಸುರತ್ಕಲ್ ಹಾಗೂ ಶ್ರೀ ವಿಜಯ ಕುಮಾರ್ ಅದ್ಯಪಾಡಿ ಪಾಕಶಾಸ್ತ್ರ ತಜ್ಞರು, ಶ್ರೀಮತಿ ಲಲಿತಾ ಸುಬ್ಬ ರಾವ್ ಇಡ್ಯಾ, ಶ್ರೀಮತಿ ಕಾವೇರಮ್ಮ ಶ್ರೀನಿವಾಸ ಶಾನುಭೋಗ್ ಇವರನ್ನು ಗೌರವಿಸಲಾಯಿತು.

ಸದರಿ ಸಭೆಯ ವೇದಿಕೆಯಲ್ಲಿ ಕಾರ್ಕಳ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮಾ, ಎಂ.ಸಿ.ಎಫ್. ಸಂಸ್ಥೆಯ ನಿರ್ದೇಶಕರಾದ ಶ್ರೀ ಪ್ರಭಾಕರ ರಾವ್, ಖ್ಯಾತ ಎಲುಬು ತಜ್ಞರಾದ ಡಾ। ಪ್ರಶಾಂತ್ ರಾವ್ ಸುರತ್ಕಲ್, ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀ ಮೋಹನ್ ರಾವ್ ಹಾಗೂ ನಮ್ಮ ಸಂಘದ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಮೇಲಿನ ಎಲ್ಲಾ ಗೌರವಾನ್ವಿತರನ್ನು ಸಂಘದ ಜೊತೆ ಕಾರ್ಯದರ್ಶಿಯವರಾದ ಶ್ರೀ ಸುಕುಮಾರ್ ರವರು ಸ್ವಾಗತಿಸಿದರು. ನಂತರ ವೇದಿಕೆಯಲ್ಲಿ ಬಿ.ಡಿ.ಎಸ್.ನಲ್ಲಿ ರ್‍ಯಾಂಕ್ ವಿಜೇತರಾದ ಕುಮಾರಿ ಸುಷ್ಮಾ ಶಶಿಧರ್ ರಾವ್ ಚಿತ್ರಾಪುರ ಇವಳನ್ನು ಸನ್ಮಾನಿಸಲಾಯಿತು. ಮತ್ತು ವಿದ್ಯಾನಿಧಿಗೆ ಸಹಕರಿಸಿದ ಶ್ರೀ ನಿರಂಜನ್ ರಾವ್, ಜನರಲ್ ಮ್ಯಾನೇಜರ್ (ಎಲ್ & ಟಿ) ಇವರ ಪರವಾಗಿ ಇವರ ತಾಯಿಯನ್ನು ವೇದಿಕೆಯಲ್ಲಿ ಗೌರವಿಸಲಾಯಿತು. ಹಾಗೂ ವಿದ್ಯಾನಿಧಿಗೆ ಪ್ರೋತ್ಸಾಹಿಸಿದ ಶ್ರೀ ಸುಬ್ರಹ್ಮಣ್ಯ ರಾವ್ ತೋಕೂರು ಇವರನ್ನು ಸಹಾ ಗೌರವಿಸಲಾಯಿತು. 2017–18ನೇ ಸಾಲಿನ ವಿದ್ಯಾನಿಧಿಗೆ ಪ್ರೋತ್ಸಾಹಿಸಿದ ಶ್ರೀಮತಿ ಕಾಂಚನ ಮಾಲಾ ಮುಕ್ಕ ಇವರ ಪರವಾಗಿ ಇವರ ಸೊಸೆ ಶ್ರೀಮತಿ ಪರಿಮಳರವರನ್ನು ಹಾಗೂ ವಿದ್ಯಾನಿಧಿಗೆ ಪ್ರೋತ್ಸಾಹಿಸಿದ ಮತ್ತೋರ್ವ ದಾನಿಗಳಾದ ಶ್ರೀ ಪೂರ್ಣಿಮಾ ಗಣೇಶ್ ಪ್ರಸಾದ್ ಪುತ್ತೂರು ಇವರನ್ನು ಅವರ ಪರವಾಗಿ ಇವರ ತಾಯಿಯಾದ ಶ್ರೀಮತಿ ಕುಸುಮಾರವರನ್ನು ಗೌರವಿಸಲಾಯಿತು. ನಂತರ ಸಂಘದ ಸದಸ್ಯರ ಮಕ್ಕಳಿಗೆ 2016–17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಹಾಗೂ ಉನ್ನತ ಶಿಕ್ಷಣದಲ್ಲಿ ಓದುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ವಿತರಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್ ಇವರು ನನಗೆ ಈ ಹಿಂದೆ ನೀಡಿದ ಸಹಕಾರಕ್ಕೆ ಸಂಘದ ಎಲ್ಲಾ ಸದಸ್ಯರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತಾ ಮುಂದೆಯೂ ಸಹ ಸಂಘವು ನಡೆಸುವ ಎಲ್ಲಾ ಕಾರ್ಯಕ್ರಮಕ್ಕೆ ಬೆಂಬಲವನ್ನು ಕೋರಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ವಾಸುದೇವ ಶಾನುಭೋಗ್ ಇವರು ಧನ್ಯವಾದವನ್ನು ಸಲ್ಲಿಸಿದರು. ಸದರಿ ಕಾರ್ಯಕ್ರಮವನ್ನು ಶ್ರೀಮತಿ ಸುಧಾಮಣಿ ಇವರು ಯಶಸ್ವಿಯಾಗಿ ನಿರ್ವಹಿಸಿದರು. ಬಿಸಿ ಬಿಸಿಯಾದ ಭೋಜನದ ವ್ಯವಸ್ಥೆಯನ್ನು ಶ್ರೀ ಪ್ರವೀಣ್ ಕುಮಾರ್ ಬಳಗ ಮಲ್ಲಮಾರ್ ಇವರು ಸಮಾಜ ಬಾಂಧವರಿಗೆ ಉಣಬಡಿಸಿದರು.

ಭೋಜನದ ನಂತರ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಪರಿಮಳ ಮತ್ತು ಬಳಗ ಇವರ ನೇತೃತ್ವದಲ್ಲಿ ಹಾಗೂ ಯುವವೇದಿಕೆಯ ಅಧ್ಯಕ್ಷರಾದ ಶ್ರೀ ಸಂಕೇತ್ ಶಾನುಭೋಗ್ ಮತ್ತು ಬಳಗ ಇವರ ನೇತೃತ್ವದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಪುಟಾಣಿಗಳ ನೃತ್ಯವು ಎಲ್ಲರ ಮನಸೆಳೆಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಹಿಳಾ ವೇದಿಕೆಯ ಉಪಾಧ್ಯಕ್ಷರಾದ ಶ್ರೀಮತಿ ಪ್ರಶಾಂತಿ, ಕಾರ್ಯದರ್ಶಿಯವರಾದ ಶ್ರೀಮತಿ ವೀಣಾ ಹಾಗೂ ಇತರ ಎಲ್ಲಾ ಮಹಿಳಾ ಸದಸ್ಯರು ಭಾಗವಹಿಸಿದ್ದರು. ಹಾಗೂ ಈ ಕಾರ್ಯಕ್ರಮವನ್ನು ಕುಮಾರಿ ಅರ್ಪಿತಾರವರು ನಿರ್ವಹಿಸಿದರು.

## ಕವನ

ಬಿರುಕು ಬಿಡುತ್ತಿರುವ ಬಂಧಗಳು
ಸರಕು ಆಗುತ್ತಿರುವ ಸಂಬಂಧಗಳು
ನುಚ್ಚು ನೂರಾಗುತ್ತಿರುವ ಕನಸುಗಳು
ಹತಾಶೆಗೆ ಒಳಗಾಗುತ್ತಿರುವ ಮನಸ್ಸುಗಳು
ಸೋತು ಸುಣ್ಣವಾಗುತ್ತಿರುವ ಆದರ್ಶಗಳು
ನಂಬಿರುವ, ಅಧಃಪತನಗೊಳ್ಳುತ್ತಿರುವ ಮೌಲ್ಯಗಳು

ಹೀಗೆ ದುರಂತದತ್ತ ಸಾಗುತ್ತಿವೆ ಸಾಮಾಜಿಕವಾಗಿ
ನಮ್ಮೆಲ್ಲರ ಬದುಕುಗಳು !!!

–ಮಲ್ಲಿಕ್, ಉಳಿಯಾರು

Buying and selling shares
as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ–574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

# ಓಂ ಪಂಚಶ್ರೀ ನಿತ್ಯಾನುಷ್ಠಾನ ಪದ್ಧತಿ

- ವೈ. ಮೋಹನ ರಾವ್

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು, ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ ಇವರು 'ಓಂ ಪಂಚಶ್ರೀ' ಸಂಗ್ರಹಕ್ಕೆ ಹೀಗೆ ಶುಭ ನುಡಿಯುತ್ತಾರೆ-''ಪರಮಪ್ರಿಯರಾದ ಶ್ರೀಯುತ ಹರಿನಾರಾಯಣ ಭಂಡಿಯವರು ತಮ್ಮ ತೀರ್ಥರೂಪರ ಶತಮಾನೋತ್ಸವ ಹಾಗೂ ಜನ್ಮ ಸಪ್ತತಿ ಉತ್ಸವ ನಿಮಿತ್ತ ಮತ್ತು ತಮ್ಮ ಮಗಳ ವಿವಾಹ ಪ್ರಯುಕ್ತ 'ಪಂಚಶ್ರೀ' ಅನ್ನುವ ಹೆಸರಲ್ಲಿ ವಿಷ್ಣುಸಹಸ್ರನಾಮವನ್ನೂ ಒಳಗೊಂಡಂತೆ ಅನೇಕ ಸ್ತೋತ್ರಗಳ ಸಂಗ್ರಹರೂಪವಾದ ಅನುಷ್ಠಾನಪದ್ಧತಿ ಪುಸ್ತಕವನ್ನು ಪ್ರಕಟಪಡಿಸಿ ಸಾಧಕರಿಗೆ ದಾನವೀಯುವ ಕಾರ್ಯವನ್ನು ಹಮ್ಮಿಕೊಂಡದ್ದು ಸಂತೋಷದ ವಿಚಾರ. ಈ ಮೂಲಕ ಸಮಾಜದಲ್ಲಿ ಧಾರ್ಮಿಕ ಪ್ರಜ್ಞೆ ಜಾಗೃತವಾಗಿ ಎಲ್ಲರಿಗೂ ಒಳಿತಾಗಲಿ. ಶ್ರೀಕೃಷ್ಣಮುಖ್ಯಪ್ರಾಣರ ಅನುಗ್ರಹ ನಿಮ್ಮೆಲ್ಲರ ಮೇಲಿರಲಿ''.


ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಜಗದ್ಗುರು ಶ್ರೀ ಮಧ್ವಚಾರ್ಯ ಮೂಲಮಹಾ ಸಂಸ್ಥಾನಂ ಶ್ರೀಮದುಪೇಂದ್ರತೀರ್ಥಪೀಠಮ್, ಶ್ರೀ ಪುತ್ತಿಗೆಮಠ, ಉಡುಪಿ ಇವರು 'ಓಂ ಪಂಚಶ್ರೀ' ಸಂಗ್ರಹಕ್ಕೆ ಹೀಗೆ ಶುಭ ನುಡಿಯುತ್ತಾರೆ- ''ಒಂದೊಂದು ಹೋಮ ಹವನ ವಸ್ತುಪೂಜೆಗಳಿಗೆ ಬೇರೆ ಬೇರೆ ಫಲಗಳಿವೆ. ನಿತ್ಯಾಚರಣೆಗೆ ಏನು ಫಲವಿದೆ ಎಂದು ಕೇಳುವವರೇ ಎಲ್ಲರೂ. ಆದರೆ ನಿತ್ಯಾಚರಣೆಯೇ ಫಲದಾಯಕ ಹೊರತು ನೈಮಿತ್ತಿಕಾಚರಣೆಯಲ್ಲ. ಅದನ್ನೇ ಕೃಷ್ಣ ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ಎಂದದ್ದು''.

ರಾಜರ್ಷಿ ಡಿ.ವಿರೇಂದ್ರ ಹೆಗ್ಗಡೆಯವರು ಈ ಸಂಗ್ರಹಕ್ಕೆ ಹೀಗೆ ಅನುಗ್ರಹವನ್ನು ನೀಡಿರುತ್ತಾರೆ- ''ನೀವು ನಿಮ್ಮ ತೀರ್ಥರೂಪರಾದ ದಿ| ಗೋಪಾಲಕೃಷ್ಣ ಭಂಡಿಯವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಯೋಗ ಮತ್ತು ಸ್ತೋತ್ರಗಳ 'ಓಂ ಪಂಚಶ್ರೀ ನಿತ್ಯಾನುಷ್ಠಾನ ಪದ್ಧತಿ' ಎಂಬ ಕಿರು ಪುಸ್ತಕವನ್ನು ಪ್ರಕಟಿಸಲಿರುವ ವಿಚಾರ ತಿಳಿದು ಸಂತೋಷ ವಾಯಿತು''.

ಶ್ರೀ ಕೇಶವ ಅಡಿಗರು, ಪ್ರಧಾನ ಅರ್ಚಕರು, ಪೆರ್ಡೂರು ಹೀಗೆ ಹೇಳುತ್ತಾರೆ-''ಶ್ರೀಯುತ ಹರಿನಾರಾಯಣ ಭಂಡಿಯವರು ಅವರ ತೀರ್ಥರೂಪರಾದ ಸ್ನೇಹಜೀವಿ, ದೈವಭಕ್ತರು ಮಧುರಭಾಷಿಯವರಾದ ಗೋಪಾಲಕೃಷ್ಣ ಭಂಡಿಯವರ ಸವಿನೆನಪಿಗಾಗಿ ಈ ಸ್ತೋತ್ರ ಪುಸ್ತಕವನ್ನು ಪ್ರಕಟಿಸಿರುತ್ತಾರೆ''.

ಶ್ರೀಕಾಂತ ಅಡಿಗರು, ಅರ್ಚಕರು ಹಾಗೂ ನಿವೃತ್ತ ಅಧ್ಯಾಪಕರು, ಪೆರ್ಡೂರು ಹೀಗೆ ಹೇಳುತ್ತಾರೆ- ''ತೀರ್ಥರೂಪರಾದ ಸ್ನೇಹಜೀವಿ, ದೈವಭಕ್ತರು ಮಿತಭಾಷಿಯವರಾದ ಗೋಪಾಲಕೃಷ್ಣ ಭಂಡಿಯವರ (ಗುಂಡಪ್ಪಯ್ಯ) ಸವಿನೆನಪಿಗಾಗಿ ಸ್ತೋತ್ರದ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಈ ಪುಸ್ತಕದಲ್ಲಿ ಪ್ರಕಟಿಸಿರುವ ಸ್ತೋತ್ರಗಳನ್ನು ಭಕ್ತವೃಂದದವರು ದಿನಾ ಪಠಿಸಿ ದೇವತಾ ಅನುಗ್ರಹಕ್ಕೆ ಪಾತ್ರರಾಗಲಿ. ಹರಿನಾರಾಯಣ ಭಂಡಿಯವರ ಕುಟುಂಬಕ್ಕೆ ಶ್ರೀ ಅನಂತಪದ್ಮನಾಭ ದೇವರು ಆಯುರಾರೋಗ್ಯ ಐಶ್ವರ್ಯಗಳನ್ನಿತ್ತು ಹರಸಲಿ''.

ಪೆರ್ಡೂರು ರಾಘವೇಂದ್ರ ಅಡಿಗರ ಶುಭನುಡಿ-''ಇದೀಗ ತಮ್ಮ ಕೊನೆಯ ಮಗಳ ವಿವಾಹದ ಸಂದರ್ಭದಲ್ಲಿ ಭಂಡಿಯವರು ತಮ್ಮ ಸಹೋದರರೊಂದಿಗೆ ಜತೆಗೂಡಿ ತೀರ್ಥರೂಪರ ನೆನಪಿಗಾಗಿ ನಿತ್ಯಪಠನ ಯೋಗ್ಯವಾದ ಈ ಕೃತಿ ಪ್ರಕಟಿಸಿದ್ದಾರೆ. ಇದಕ್ಕೆ ಧರ್ಮಸ್ಥಳ ದೇವರ ಮತ್ತು ಧರ್ಮಾಧಿಕಾರಿ ರಾಜರ್ಷಿ ವೀರೇಂದ್ರ ಹೆಗ್ಗಡೆ, ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥರು ಕುಲಗುರುಗಳ ಹಾಗೂ ಪೆರ್ಡೂರಿನ ಹಿರಿಯ ಅರ್ಚಕ ಶ್ರೀ ಕೇಶವ ಅಡಿಗರ ಕೃಪಾಶೀರ್ವಾದವಿದೆ. ನೈತಿಕ ಶಿಕ್ಷಣದ ಮೂಲಕ ಉತ್ತಮ ಸಂಸ್ಕಾರ ನೀಡಬೇಕು ಎನ್ನುವ ಆಶಯವನ್ನು ಈ ಹೊತ್ತಗೆ ಪೂರ್ಣಗೊಳಿಸಿದೆ ಎನ್ನುವುದು ನನ್ನ ನಂಬಿಕೆ. ಈ ಕೃತಿಯನ್ನು ಹೊರತರುವಲ್ಲಿ ಹೆಚ್ಚಿನ ಉತ್ಸಾಹ ತೋರಿದ ಭಂಡಿ ಸಹೋದರರಾದ ನಾಗರಾಜ ಭಂಡಿ, ಹರಿನಾರಾಯಣ ಭಂಡಿ, ನರಸಿಂಹ ಭಂಡಿ, ಪದ್ಮನಾಭ ಭಂಡಿ, ರವೀಂದ್ರ ಭಂಡಿ, ಗಣೇಶ ಭಂಡಿ ಮತ್ತು ಸೊಸೆಯಂದಿರು, ಸಹೋದರಿ ರತ್ನಮಾಲಾ ರಾಮಚಂದ್ರ ರಾವ್ ಮತ್ತು ಮೊಮ್ಮಕ್ಕಳು ಮತ್ತು ಮರಿಮಕ್ಕಳು ಇವರೆಲ್ಲರ ಮೇಲೂ ಪದ್ಮನಾಭಸ್ವಾಮಿಯ ಅನುಗ್ರಹವಿರಲಿ''.




ಕೃತಿ : **ಓಂ ಪಂಚಶ್ರೀ ನಿತ್ಯಾನುಷ್ಠಾನ ಪದ್ಧತಿ** (ಸ್ತೋತ್ರಗಳು ಮತ್ತು ಯೋಗ) ಸಂಗ್ರಹ : **ಪೆರ್ಡೂರು ಹರಿನಾರಾಯಣ ಭಂಡಿ, ಯೋಗ ಶಿಕ್ಷಕರು** ವಿಳಾಸ : **'ಓಂ ಪಂಚಶ್ರೀ', ಪೆರ್ಡೂರು, ಉಡುಪಿ ಜಿಲ್ಲೆ**

ಎಸ್.ನಿತ್ಯಾನಂದ ಪಡ್ರೆ, ನಿವೃತ್ತ ಹಿರಿಯ ಉಪಸಂಪಾದಕ, ಉದಯವಾಣಿ, ಮಣಿಪಾಲ ಇವರು ಕೃತಿಯ 'ನಂಬಿ ಕೆಟ್ಟವರಿಲ್ಲವೋ...' ಹೀಗೆ ನುಡಿಯುತ್ತಾರೆ- ''ಪೆರ್ಡೂರು ಹರಿನಾರಾಯಣ ಭಂಡಿಯವರು ಮೇಲ್ನೋಟಕ್ಕೆ ಒಬ್ಬ ಸಾಮಾನ್ಯ ಮನುಷ್ಯ. ಆದರೆ ಇವರ ಬದುಕು 'ಸಿಂಪಲ್ ಲೀವಿಂಗ್ ಆಂಡ್ ಹೈ ಥಿಂಕಿಂಗ್' ಎನ್ನುತ್ತಾರಲ್ಲ ಹಾಗೆ. ಸರಳ ಉಡುಗೆಯ ಜತೆ ನಯವಿನಯದ ಮಾತು ಇವರಲ್ಲಿ ಢಾಳಾಗಿ ಕಾಣಿಸುವ ಗುಣ. ನಂಬಿ ಕೆಟ್ಟವರಿಲ್ಲವೋ ಎನ್ನುವ, ಎಣ್ಣೆ ಕಪ್ಪು ಬಣ್ಣದ ಈ ವಾಮನ ಮೂರ್ತಿ ಒಬ್ಬ ಸ್ನೇಹಶೀಲ ವ್ಯಕ್ತಿ ಎನ್ನುವುದು ಅವರ ಒಡನಾಟಕ್ಕೆ ಬಂದವರಿಗಷ್ಟೇ ಗೊತ್ತು. ತನ್ನ ಬದುಕಿನ ಎಪ್ಪತ್ತರ ವಯಸ್ಸಿನಲ್ಲೂ; 99 ವರ್ಷ ಬಾಳಿ ಬದುಕಿದ ತನ್ನ ತಂದೆಯ ಸ್ಮರಣಾರ್ಥ ಸ್ತೋತ್ರ ಪುಸ್ತಕವೊಂದನ್ನು ಪ್ರಕಟಿಸಿ ಅಗತ್ಯವುಳ್ಳವರಿಗೆ ಉಚಿತವಾಗಿ ವಿತರಿಸಬೇಕು ಎನ್ನುವ ಹಂಬಲ ಇವರದು.''

'ಓಂ ಪಂಚಶ್ರೀ' ಸಂಗ್ರಹವನ್ನು ಮಾಡಿದ ಪಿ.ಹರಿನಾರಾಯಣ ಭಂಡಿಯವರ 'ಕೃತಜ್ಞತೆ'ಯ ಕೆಲವು ಸಾಲುಗಳು-''ನಮ್ಮ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಎಲ್ಲಾ ರೀತಿಯ ನೆರವು ನೀಡುತ್ತಾ ಬಂದಿರುವ, ನಮ್ಮ ಕುಟುಂಬದ ಸಹೋದರ, ಸಹೋದರಿಯರಿಗೂ ಕುಟುಂಬದ ಎಲ್ಲಾ ಸದಸ್ಯರಿಗೂ ನಮ್ಮ ಬ್ರಾಹ್ಮಣ ಸಮಿತಿಯ ಎಲ್ಲಾ ಸನ್ಮಿತ್ರರಿಗೂ ಆತ್ಮೀಯ ನಮನಗಳನ್ನು ಸಲ್ಲಿಸುತ್ತೇನೆ.''

ಈ ಕೃತಿಯಲ್ಲಿ ಒಟ್ಟು 34 ಸ್ತೋತ್ರಗಳ ಸಂಗ್ರಹವಿದೆ. ಈ ಕೃತಿಗಾಗಿ ಪಿ.ಹರಿನಾರಾಯಣ ಭಂಡಿಯವರಿಗೆ ಪ್ರೀತಿಯ ನಮಸ್ಕಾರಗಳು.

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**

**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

# ಕುಂದಾಪುರ ಸಂಘದ ಮಹಾಸಭೆ

ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ ವಾರ್ಷಿಕ ಮಹಾಸಭೆಯು ಇತ್ತೀಚಿಗೆ ಕೋಟೇಶ್ವರ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಗೋಪಾಲಕೃಷ್ಣ ಹೆಬ್ಬಾರರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಸುಮಾ ಅರುಣ್ ಶಾನಭಾಗ್ ಪ್ರಾರ್ಥನೆಗೈದರು. ಸಂಘದ ಕಾರ್ಯದರ್ಶಿ ಶ್ರೀ ಸತ್ಯನಾರಾಯಣ ಹೆಬ್ಬಾರ್ ಆಯವ್ಯಯ ಲೆಕ್ಕ ಮಂಡಿಸಿದರು. ಮುಂದಿನ ಮೂರು ವರ್ಷದ ಆಡಳಿತ ಮಂಡಳಿಯ ಆಯ್ಕೆಯಲ್ಲಿ ಶ್ರೀ ಗೋಪಾಲಕೃಷ್ಣ ಹೆಬ್ಬಾರ್ ಅಧ್ಯಕ್ಷರಾಗಿ ಹಾಗೂ ಶ್ರೀ ಜಗದೀಶ ರಾವ್ ಹೊಸ್ಕೋಟೆ ಕಾರ್ಯದರ್ಶಿಯಾಗಿ, ಶ್ರೀ ಸತ್ಯನಾರಾಯಣ ಹೆಬ್ಬಾರ್ ಮರೂರು ಕೋಶಾಧಿಕಾರಿಯಾಗಿ, ಶ್ರೀ ಸುರೇಶ ಹೆಬ್ಬಾರ್ ತೆಂಕಬೈಲು, ಶ್ರೀ ಕೃಷ್ಣಮೂರ್ತಿ ಹೆಬ್ಬಾರ್ ವಕ್ವಾಡಿ, ಶ್ರೀಮತಿ ಶಾಂತ ಗಣೇಶ ಕುಂಭಾಶಿ ಉಪಾಧ್ಯಕ್ಷರುಗಳಾಗಿ ಶ್ರೀ ಎಚ್. ಆನಂದ ರಾವ್ ಹೊಸ್ಕೋಟೆ, ಶ್ರೀ ರಂಗನಾಥ ಸೌಕೂರು, ಶ್ರೀ ಸುಭಾಶ್ಚಂದ್ರ ಬಳ್ಕೂರು,ಶ್ರೀ ಪ್ರಭಾಕರ ಮರ್ಟ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಶ್ರೀ ಉಮೇಶ್ ಶಾನಭಾಗ್ ಇವರು ಸಂಘದ ಅಭಿವೃದ್ಧಿ ಒಬ್ಬರಿಂದ ಸಾಧ್ಯವಿಲ್ಲ ಎಲ್ಲರೂ ಒಟ್ಟಾಗಿ ಸಂಘದ ಸರ್ವತೋಮುಖ ಅಭಿವೃದ್ಧಿಯತ್ತ ದುಡಿಯೋಣ ಎನ್ನುವುದರೊಂದಿಗೆ ನೂತನ ಪದಾಧಿಕಾರಿಗಳಿಗೆ ಶುಭಕೋರಿದರು. ಶ್ರೀ ಗಣೇಶ ರಾವ್ ಕುಂಭಾಶಿ ಮತ್ತು ಶ್ರೀ ಸುರೇಶ ಹೆಬ್ಬಾರ್ ತೆಂಕಬೈಲು ಇವರುಗಳು ನೂತನ ಪದಾಧಿಕಾರಿಗಳಿಗೆ ಶುಭಕೋರಿದರು.ಸ್ಥಾಪಕಾಧ್ಯಕ್ಷರಾದ ಶ್ರೀ ಎಚ್. ಹಿರಿಯಣ್ಣ ರಾವ್ ಉಪಸ್ಥಿತರಿದ್ದರು. ಶ್ರೀ ದಯಾನಂದ ರಾವ್ ಶಂಕರನಾರಾಯಣ ಸ್ವಾಗತಿಸಿ ವಂದನಾರ್ಪಣೆ ಸಲ್ಲಿಸಿದರು.

# ಹರ್ಷ ಫಾರ್ಮಿನಲ್ಲಿ ವನಮಹೋತ್ಸವ

ಮಂಗಳೂರಿನ ಕೇದಿಗೆ ಹರ್ಷಕುಮಾರ್ ಹಾಗೂ ಕನಕವಲ್ಲಿ ದಂಪತಿಗಳು ಲಯನ್ಸ್‌ಕ್ಲಬ್ ಮುಖಾಂತರ ಹಾಗೂ ಇತರ ಸಾಮಾಜಿಕ ಸೇವಾ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಪ್ರತಿ ವರ್ಷವೂ ಅವರು ತಮ್ಮ ಊರಿನಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಸಂಘಟಿಸಿ ಯುವಕರಿಗೆ ಕಾಡು ಬೆಳೆಸುವ ಕುರಿತು ಅರಿವು ಮೂಡಿಸುತ್ತಿದ್ದಾರೆ. ಈ ವರ್ಷವೂ ಲಯನ್ಸ್ ಕ್ಲಬ್‌ನ ಸದಸ್ಯರನ್ನು ಸಂಘಟಿಸಿ ಬಂಟ್ವಾಳದ ಹರ್ಷ ಫಾರ್ಮಿನಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಅವರನ್ನು ಸಾರ್ವಜನಿಕರು ಅಭಿನಂದಿಸಿದರು.

# ಭಾರತೀಯ ವೈದ್ಯ ಪದ್ಧತಿಯ ಪರಿಷತ್ತಿಗೆ ಆಯ್ಕೆ



ಹುಬ್ಬಳ್ಳಿ ಆಯುರ್ವೇದ ಮಹಾವಿದ್ಯಾಲಯದ ಕಾಯಚಿಕಿತ್ಸಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು, ಆಯುರ್ವೇದ ಶಿಕ್ಷಣ ತಜ್ಞರು, ಖ್ಯಾತ ಚಿಕಿತ್ಸಕರು ಆದ ಡಾ| ಪ್ರಶಾಂತ ಎ.ಎಸ್. ಇವರು ಭಾರತ ಸರ್ಕಾರದ ಆಯುಷ್ ಸಚಿವಾಲಯದಿಂದ (Ministry of AYUSH, Govt. of India) ಭಾರತೀಯ ವೈದ್ಯಪದ್ಧತಿಯ ಕೇಂದ್ರ ಪರಿಷತ್ತಿಗೆ (Central Council of Indian Medicine, New Delhi) ನಾಮ ನಿರ್ದೇಶನಗೊಂಡಿರುತ್ತಾರೆ. ಪ್ರಸ್ತುತ ಇವರು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆಯುರ್ವೇದ ಅಧ್ಯಯನ ಪೀಠದ (Board of Studies) ಚೇರಮನ್ ಆಗಿರುತ್ತಾರೆ. ಡಾ| ಪ್ರಶಾಂತ ಇವರು ಕೇರಳದ ಕಾಸರಗೋಡು ಅಡೂರು ಗ್ರಾಮದವರಾಗಿದ್ದಾರೆ. ಹಾಗೂ ಅವರು ಖ್ಯಾತ ಯಕ್ಷಗಾನ ಕಲಾವಿದ ಕೀರ್ತಿಶೇಷ ಅಡೂರು ಶ್ರೀಧರ ರಾವ್‌ರವರ ಸುಪುತ್ರರಾಗಿದ್ದಾರೆ.

# ಸಿ.ಎಸ್.ರಾವ್ ವಿರಚಿತ ಅಮೆರಿಕಾ-ಅಮೆರಿಕಾ ಪುಸ್ತಕ ಬಿಡುಗಡೆ



ಉಡುಪಿ ಹಿರಿಯ ನಾಗರಿಕರ ಸಂಸ್ಥೆಯ ವಾರ್ಷಿಕ ಕ್ರೀಡಾಕೂಟ, ವಾರ್ಷಿಕ ಸಾಮಾನ್ಯ ಮಹಾಸಭೆ, ಬಹುಮಾನ ವಿತರಣಾ ಸಮಾರಂಭದಲ್ಲಿ ಶ್ರೀ ಸಿ.ಎಸ್.ರಾವ್ ವಿರಚಿತ 'ಅಮೆರಿಕಾ ಅಮೆರಿಕಾ' ಪುಸ್ತಕ ಬಿಡುಗಡೆಯು ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದ ಆವರಣದಲ್ಲಿ ಜರಗಿತು.

ಶ್ರೀ ಸಿ.ಎಸ್.ರಾವ್ ಅವರು ಬರೆದಿರುವ 'ಅಮೆರಿಕಾ-ಅಮೆರಿಕಾ' ಪುಸ್ತಕವನ್ನು ಡಾ| ನಿ.ಬಿ. ವಿಜಯ ಬಲ್ಲಾಳ್ ಅವರು ಬಿಡುಗಡೆ ಗೊಳಿಸಿದರು. ಬಿ.ಭುವನಪ್ರಸಾದ್ ಹೆಗ್ಡೆ ಅವರು ಪುಸ್ತಕ ಪರಿಚಯ ಮಾಡಿದರು.

## ಶ್ರೀ ಜ್ಞಾನಶಕ್ತಿ ಟ್ರಸ್ಟ್ ಬೆಂಗಳೂರು

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ ಹಾಗೂ ಶ್ರೀ ಜ್ಞಾನಶಕ್ತಿ ಟ್ರಸ್ಟ್ ಬೆಂಗಳೂರು ಇವರ ಸಹಭಾಗಿತ್ವದಲ್ಲಿ ತಾ.17-12-2017ರಂದು ರವಿವಾರ ನಡೆಯಲಿರುವ ವಾರ್ಷಿಕ ಸಭೆಯಲ್ಲಿ ನಮ್ಮ ಸಮಾಜದ ರ್‍ಯಾಂಕ್ ವಿಜೇತ ಮತ್ತು ವಿಶಿಷ್ಟ ಸಾಧನೆಗೈದ ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕಾರ್ಯಕ್ರಮವಿದೆ. ಈ ಬಗ್ಗೆ ಮಾಹಿತಿಯನ್ನು ಕೆಳಗಿನ ವಿಳಾಸಕ್ಕೆ ತಾ.10-12-2017ರ ಒಳಗೆ ಕಳುಹಿಸಲು ವಿನಂತಿ.

**ಶ್ರೀ ಬಿ. ಅಚ್ಚುತ ರಾವ್**

**001-ಗರುಡ ರಾಯಲ್ ಅಪಾರ್ಟ್‌ಮೆಂಟ್, ಜಾಲಹಳ್ಳಿ ವಿಲೇಜ್, ಬೆಂಗಳೂರು-560013.**

**ಮೊಬೈಲ್ : 9886231491, ಇ-ಮೇಲ್ : b.achutha.rao@gmail.com**

## ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ

ಆತ್ಮೀಯರೇ ಪಾವಂಜೆ 11-10-2017

ದಿನಾಂಕ 22-11-2017ನೇ ಬುಧವಾರದಿಂದ ದಿನಾಂಕ 24-11-2017ನೇ ಶುಕ್ರವಾರದವರೆಗೆ ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ

### ಚಂಪಾಷಷ್ಠಿ ಮಹೋತ್ಸವವು

ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀದೇವರ ಮೂಲ ಮೃತ್ತಿಕಾ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಯಂ.ಶಶೀಂದ್ರ ಕುಮಾರ್** — ಆಡಳಿತ ಮೊಕ್ತೇಸರರು

**ಡಾ। ಯಾಜಿ ಎಚ್.ನಿರಂಜನ ಭಟ್** — ಧರ್ಮದರ್ಶಿಗಳು

## ಬದೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಪುತ್ತೂರು

ಆತ್ಮೀಯರೇ

ಸ್ವಸ್ತಿ! ಶ್ರೀ ಹೇಮಲಂಬಿ ನಾಮ ಸಂವತ್ಸರದ ಮಾರ್ಗಶಿರ ಶುಕ್ಲ ಪಕ್ಷ ಶುದ್ಧ ಷಷ್ಠಿ ದಿನಾಂಕ 24-11-2017ನೇ ಶುಕ್ರವಾರದಂದು ಪಾವಂಜೆ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ

### ಶ್ರೀ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಮಹೋತ್ಸವವು

ಜರಗಲಿರುವುದು.

ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀದೇವರನ ಮೂಲ ಮೃತ್ತಿಕಾ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಅಧ್ಯಕ್ಷರು ಮತ್ತು ಸದಸ್ಯರು**

ಜೀರ್ಣೋದ್ಧಾರ ಸಮಿತಿ, ಉತ್ಸವ ಸಮಿತಿ, ಕುಂಭಾಟ್ ಫ್ಯಾಮಿಲಿ ಚಾರಿಟೇಬಲ್ ಟ್ರಸ್ಟ್ ಮತ್ತು ಆಡಳಿತ ಮಂಡಳಿ





**RAJESH POWER PRESS**

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ : ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು

**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*

SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಲೆಸ್ಟೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams


ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ
ಪ್ರತಿ ಮಂಗಳವಾರ : ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ
ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ }
ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "ಪಾರಾಯಣ" ಸಂಜೆ ಗಂಟೆ 4-30ರಿಂದ

ತಾ.06-12-2017 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)

ತಾ.21-11-2017 ಮತ್ತು 18-12-2017 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.23-11-2017 ಮತ್ತು ತಾ.07-12-2017 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**





**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE



ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ಘಟಕ ನಡೆಸಿದ ''ವಿದ್ಯಾರ್ಥಿಯೆಡೆಗೆ ಸಾಹಿತಿ'' ಸರಣಿಯಲ್ಲಿ ಕನ್ನಡ ಡಿಂಡಿಮ ಕಾರ್ಯಕ್ರಮದಲ್ಲಿ ಕಾರ್ಕಳ ಜ್ಞಾನಸುಧಾ ಕಾಲೇಜ್‌ನಲ್ಲಿ ವಿದ್ಯಾರ್ಥಿಗಳ ಜೊತೆಗೆ ಅನು ಬೆಳ್ಳೆ (ರಾಘವೇಂದ್ರ ಬಿ.ರಾವ್) ಇವರು ಪಡುಬೆಳ್ಳೆ ದಿವಂಗತ ಗೋಪಾಲಕೃಷ್ಣ ರಾವ್ ಮತ್ತು ರತ್ನಮ್ಮ ದಂಪತಿಗಳ ಪುತ್ರ.



ಮೂಡಬಿದಿರೆ ಶ್ರೀ ಕೃಷ್ಣ ಫ್ರೆಂಡ್ಸ್ ಸರ್ಕಲ್ ವತಿಯಿಂದ 31 ನೇ ವರುಷದ ಮೊಸರುಕುಡಿಕೆ ಉತ್ಸವದ ಅಂಗವಾಗಿ ಯಕ್ಷಗಾನ ಕಲಾವಿದ ಬೆಳುವಾಯಿ ಎಮ್. ದೇವಾನಂದ ಭಟ್ ಇವರನ್ನು ಉತ್ತಮ ಕಲಾ ಸಂಘಟಕ ಎಂಬ ನೆಲೆಯಲ್ಲಿ ಸಂಮಾನಿಸಲಾಯಿತು.




ಅಕ್ಟೋಬರ್ ತಿಂಗಳ ದಿನಾಂಕ 7ರಂದು ಹರಿದಾಸ ಶ್ರೀ ಮ.ನಾ.ಹೆಬ್ಬಾರರು ಅಮೆರಿಕಾದ ಅಟ್ಲಾಂಟಾದಲ್ಲಿರುವ ‘ನೃಪತುಂಗ ಕನ್ನಡ ಕೂಟ’ಕ್ಕೆ ಸಂದರ್ಶನವಿತ್ತು, ಕೂಟದ ಸದಸ್ಯರ ಕೋರಿಕೆಯ ಮೇರೆಗೆ ‘ಭಕ್ತ ಕನಕದಾಸ’ ಎಂಬ ಹರಿಕಥಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ದೀಪಾವಳಿ ಸಂಭ್ರಮದಲ್ಲಿ-ಗೋಪೂಜೆ

ಪುಣ್ಯಕೋಟಿ ಗೋ ಸೇವಾ ಟ್ರಸ್ಟ್ (ರಿ.) ಹೇರೂರು, ಬ್ರಹ್ಮಾವರ ಆಯೋಜಿಸಿದ ಗೋಪೂಜಾ ಕಾರ್ಯಕ್ರಮವನ್ನು ಟ್ರಸ್ಟಿನ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ ಹೆಬ್ಬಾರ್ (ಮಾಲಕರು, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ) ಇವರ ಮನೆ ವಠಾರದಲ್ಲಿ ತಾ.20-10-2017ರಂದು ಸಂಭ್ರಮದಿಂದ ಆಚರಿಸಲಾಯಿತು. ಅತಿಥಿಗಳಿಂದ ದೀಪ ಬೆಳಗಿಸಿ, ಭಾರತಮಾತೆಗೆ ಪುಷ್ಪಾರ್ಚನೆ ನಮನ ಹಾಗೂ ಗಣೇಶ ಸ್ತುತಿಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಮುಖ್ಯಅತಿಥಿಯಾಗಿ ಆರೆಸ್ಸೆಸ್ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ ದಾ.ಮ.ರವೀಂದ್ರ ಆಗಮಿಸಿದ್ದರು. ಹಿರಿಯರಾದ ಸೋಮಶೇಖರ ಭಟ್ ಗೋಪೂಜೆಗೆ ಚಾಲನೆ ನೀಡಿದರು. ಕಡಿಯಾಳಿ ಸಾರ್ವಜನಿಕ ಗಣೇಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಕಿಣಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮಂಗಳೂರು ವಿಭಾಗ ಕಾರ್ಯಕಾರಿಣಿ ಸದಸ್ಯ ಶಂಭು ಶೆಟ್ಟಿ, ಇತರ ಗಣ್ಯರು ಉಪಸ್ಥಿತರಿದ್ದರು. ಮಂಜುನಾಥ ಭಟ್, ಟ್ರಸ್ಟ್ ಸದಸ್ಯ ವಂದಿಸಿದರು. ಕಾರ್ಯದರ್ಶಿ ಕೆ.ಮಂಜುನಾಥ ಹೆಬ್ಬಾರರು ಸ್ವಾಗಿಸಿ ಕಾರ್ಯಕ್ರಮ ನಿರೂಪಿಸಿದರು. ಆಮಂತ್ರಿತರು ವೈಯಕ್ತಿಕವಾಗಿ ಗೋಪೂಜೆ ನೆರವೇರಿಸಿ ಶಕ್ತ್ಯಾನುಸಾರ ದೇಣಿಗೆ ಸಮರ್ಪಿಸಿದರು. ಇನ್ನೋರ್ವ ಟ್ರಸ್ಟ್ ಸದಸ್ಯ ಜಿ.ಕೆ.ಕೋಲ್ಪೆಯವರು ಪೂಜಾ ಕೈಂಕರ್ಯವನ್ನು ನಡೆಸಿಕೊಟ್ಟರು.



## ಅತ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ

ಶ್ರೀ ವಿನಯಕುಮಾರ್ ಅದ್ಯಪಾಡಿ, ಉಡುಪಿ ಕೊಂಕಣ ರೈಲ್ವೇ ಉದ್ಯೋಗಿಯಾಗಿರುವ ಇವರು ಅಕ್ಟೋಬರ್ 15ರಂದು ಉಡುಪಿಯ ಅಜ್ಜರಕಾಡು ಮೈದಾನದಲ್ಲಿ ನಡೆದ 45+ ಕೆಟಗರಿ ಅಂತರ್ ಜಿಲ್ಲಾ ಮಟ್ಟದ ಮಾಸ್ಟರ್ಸ್ ಅತ್ಲೆಟಿಕ್ಸ್‌ನಲ್ಲಿ 800 ಮೀಟರ್, 1500 ಮೀಟರ್ ಹಾಗೂ 5000 ಮೀಟರ್ ಓಟದ ವಿಭಾಗದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಇವರು ಡಿಸೆಂಬರ್‌ನಲ್ಲಿ ಬೆಂಗಳೂರಿನ ಹೊಸಕೋಟೆಯಲ್ಲಿ ನಡೆಯುವ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.



## ರ್‍ಯಾಂಕ್ ವಿಜೇತೆ

ಚಿತ್ರಾಪುರ ಶಶಿಧರ ರಾವ್ ಮತ್ತು ಸುಕನ್ಯಾ ದಂಪತಿಗಳ ಪುತ್ರಿ ಕು.ಸುಷ್ಮಾ ಇವರು ಬಿ.ಡಿ.ಎಸ್.(ದಂತ ವೈದ್ಯ) ಪದವಿಯ ಅಂತಿಮ ವರ್ಷದಲ್ಲಿ ನಡೆದ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಉತ್ತೀರ್ಣರಾಗಿರುತ್ತಾರೆ. ಇದೀಗ ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮಂಗಳೂರಿನ ಎ.ಜೆ.ಕಾಲೇಜಿನಲ್ಲಿ ಎಮ್.ಡಿ.ಎಸ್. ಪದವಿಗಾಗಿ ಆಯ್ಕೆಗೊಂಡು ವಿದ್ಯಾಭ್ಯಾಸ ಮುಂದುವರಿಸಿದ್ದಾರೆ.

## ನಿಧನ

### ನಿವೃತ್ತ ಶಿಕ್ಷಕ ಬಿ.ನಾರಾಯಣ ರಾವ್



ಬ್ರಹ್ಮಾವರ ಹಂದಾಡಿ ಗ್ರಾಮದ ನಿವಾಸಿ, ನಿವೃತ್ತ ಶಿಕ್ಷಕ ಬಿ.ನಾರಾಯಣ ರಾವ್ (77) ಅ.22ರಂದು ಹೃದಯಾಘಾತದಿಂದ ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಹಿಂದಿ ಪಂಡಿತರಾಗಿದ್ದ ಅವರು ಶಿಕ್ಷಕರಾಗಿ ಬಾರಕೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಿವೃತ್ತಿಯಾದ ಅನಂತರದಲ್ಲಿ ಜ್ಯೋತಿಷವನ್ನು ಹವ್ಯಾಸಿ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು.

ಬಾರಕೂರು ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಉತ್ಸವ ಸಮಿತಿ ಹಾಗೂ ಸಿಂಹಾಸನಗುಡ್ಡೆ ಬನ್ನಿ ಶ್ರೀ ಮಹಾಕಾಳಿ ದೇವಸ್ಥಾನದ ಸದಸ್ಯರಾಗಿದ್ದರು.

### ಶ್ರೀಮತಿ ಪದ್ಮಾಕ್ಷಿ

ಕಿಗ್ಗ ನಿವಾಸಿ ಶ್ರೀಮತಿ ಪದ್ಮಾಕ್ಷಿ (ಭೂಮಮ್ಮ) ಇವರು ತಾ.19-10-2017ರಂದು ನಿಧನ ಹೊಂದಿದವರು.

## ಶುಭ ವಿವಾಹ

ಬೆಂಗಳೂರಿನ ಶ್ರೀಮತಿ ಸುಜಾತಾ ಮತ್ತು ಶ್ರೀ ವೈ.ವಿ.ಜಯರಾಮ ರಾವ್‌ರ ಸುಪುತ್ರ **ಸಂದೀಪ್** ಹಾಗೂ ಶ್ರೀಮತಿ ಸುವರ್ಣ ಮತ್ತು ಶ್ರೀ ಪ್ರದೀಪ್ ಕುಲಕರ್ಣಿ ಇವರ ಪುತ್ರಿ **ರೇಷ್ಮಾ** ಇವರ ವಿವಾಹವು ಕಾಕಡೆ ಪ್ಯಾಲೇಸ್ ಮಂಗಲ ಕಾರ್ಯಾಲಯ ಪುಣೆ ಇಲ್ಲಿ ತಾ.03-09-2017ರಂದು ನೆರವೇರಿತು.

★★★★ ★★★★

ಕೇದಿಗೆ ಶಿವರಾವ್ ಮತ್ತು ಶ್ರೀಮತಿ ಸಂಧ್ಯಾ ಇವರ ಸುಪುತ್ರಿ **ರಾಜೇಶ್ವರಿ** ಹಾಗೂ ಅಡೂರು ಬಳಕಿಲ ಪ್ರಭಾಕರ ರಾವ್ ಮತ್ತು ಶ್ರೀಮತಿ ವಿದ್ಯಾಶಾಲಿನಿ ಇವರ ಪುತ್ರ **ಹರ್ಷಿತ್** ಇವರ ವಿವಾಹವು ಪಾಣೆಮಂಗಳೂರಿನ ನಂದಾದೀಪ ಕಲ್ಯಾಣ ಮಂಟಪದಲ್ಲಿ ತಾ.27-08-2017ರಂದು ನೆರವೇರಿತು.



## ಮೂಡುಬಿದಿರೆ : ಮರದ ಲಾಲಕಿ ಸಮರ್ಪಣೆ

ಮೂಡುಬಿದಿರೆಯ ಪ್ರಾಂತ್ಯ ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ದೊಡ್ಡಮನೆಯ ಶ್ರೀ ಚಂದ್ರಶೇಖರ ಮಹಾಗಣಪತಿ ದೇವರಿಗೆ ನೂತನವಾಗಿ ನಿರ್ಮಿಸಿರುವ ಮರದ ಲಾಲಕಿಯ ಸಮರ್ಪಣಾ ಕಾರ್ಯಕ್ರಮವು 2017ರ ಅಕ್ಟೋಬರ್ 20ರಂದು ನೆರವೇರಿತು. ದೇವರಿಗೆ ಲಾಲಕಿಯನ್ನು ಸಮರ್ಪಿಸಿ ಶ್ರೀ ದೇವರನ್ನು ಲಾಲಕಿಯಲ್ಲಿಟ್ಟು ಬಹಳ ಸಂಭ್ರಮದಿಂದ ಹೊತ್ತು ಪ್ರದಕ್ಷಿಣೆ ಹಾಕಿ ನಲಿದರು. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಅಳಿಯಂದಿರಾದಿಯಾಗಿ ಎಲ್ಲರೂ ಲಾಲಕಿಗೆ ಹೆಗಲು ನೀಡಿ ಸಂಭ್ರಮಿಸಿದರು. ತರುವಾಯ ಶ್ರೀ ದೇವರಿಗೆ ರಂಗಪೂಜಾ ಉತ್ಸವವನ್ನು ಶ್ರೀ ರತ್ನಾಕರ ಭಟ್ ದಂಪತಿಗಳು ನೆರವೇರಿಸಿದರು.

## ಪಡುಬಿದ್ರಿ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶರನ್ನವರಾತ್ರಿ ಮಹೋತ್ಸವ ಮತ್ತು ಚಂಡಿಕಾ ಹೋಮ ಕಾರ್ಯಕ್ರಮ

ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ತಾ.21-09-2017ರಿಂದ ತಾ.29-09-2017ರ ವರೆಗೆ ಶರನ್ನವರಾತ್ರಿ ಮಹೋತ್ಸವವು ಜರಗಿತು. ದಿನಾ ಬೆಳಿಗ್ಗೆ ಪ್ರಸನ್ನ ಪಾರ್ವತಿ ದೇವಿಗೆ ಪಂಚಾಮೃತ ಸೇವೆ, ಸಂಜೆ ಸಪ್ತಶತಿ ಪಾರಾಯಣ, ಭಜನಾ ಕಾರ್ಯಕ್ರಮ, ರಾತ್ರಿ ವಿಶೇಷ ದುರ್ಗಾಪೂಜೆ ಕಾರ್ಯಕ್ರಮವು ಜರಗಿತು. ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಸೇರಿ ಊರಿನ ಭಕ್ತರು ಈ ವಿಶೇಷ ದುರ್ಗಾಪೂಜೆಯಲ್ಲಿ ಭಾಗವಹಿಸಿದ್ದರು.

ತಾ.28-09-2017ರ ಗುರುವಾರ ದುರ್ಗಾಷ್ಠಮಿಯಂದು ಶ್ರೀ ಕ್ಷೇತ್ರದಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಶ್ರೀ ಚಂಡಿಕಾಹೋಮವು ಜರಗಿತು. ಲಕ್ಷ್ಮೀಕಾಂತ್ ರಾವ್ ಇನ್ನ, ಜನಾರ್ದನ ರಾವ್ ನಂದಿಕೂರು, ಡಾ। ಎನ್.ಟಿ. ಅಂಚನ್ ಪಡುಬಿದ್ರಿ ಇವರು ಈ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿದ್ದರು. ಮಧ್ಯಾಹ್ನದ ಸಾರ್ವಜನಿಕ ಅನ್ನಸಂತರ್ಪಣೆಯಲ್ಲಿ ಸುಮಾರು 500ಕ್ಕೂ ಹೆಚ್ಚು ಜನರು ದೇವರ ಪ್ರಸಾದವನ್ನು ಸ್ವೀಕರಿಸಿದರು. ಮಧ್ಯಾಹ್ನ 2 ಗಂಟೆಗೆ ದುರ್ಗಾಂಬ ಮಹಿಳಾ ಯಕ್ಷಗಾನ ಮಂಡಳಿ ತಡಂಬೈಲು, ಸುರತ್ಕಲ್ ಇವರಿಂದ ‘ಕರ್ಣಪರ್ವ’ ಎಂಬ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮವು ಜರಗಿತು.

ಶ್ರೀ ಕ್ಷೇತ್ರದ ಹೊರಗಿನ ಮತ್ತು ಒಳಗಿನ ತಗಡುಶೀಟು ಹಾಕುವ ಕೆಲಸವು ನವಂಬರ್ ತಿಂಗಳಿನಲ್ಲಿ ಪಾರಂಭಗೊಳ್ಳಲಿದ್ದು, ಭಗವದ್ಭಕ್ತರು ಈ ಅಭಿವೃದ್ಧಿ ಕೆಲಸಗಳಿಗೆ ಧನ ಸಹಾಯವನ್ನು ನೀಡಿ ಸಹಕರಿಸಬೇಕಾಗಿ ಆಡಳಿತ ಮಂಡಳಿ ವಿನಂತಿಸುತ್ತದೆ.

## ವಿಳಾಸ ಬದಲಾವಣೆ

**ಭಾರತಿ ಎಸ್. ರಾವ್**, ‘ದ ವಿನಾಯಕ’, ಎ-402, ಗಜಾನನ ಕಾಲನಿ ರಸ್ತೆ,
ಗೊರೆಗಾಂವ್ (ವೆಸ್ಟ್), ಮುಂಬಯಿ-400104.

★★★★ ★★★★

**ಎಮ್.ಶ್ರೀಕೃಷ್ಣರಾವ್,** ಪೋಸ್ಟ್ ಬಾಕ್ಸ್ ನಂ.86, ಮಡಗಾಂ-403601 (ಗೋವಾ)
ಮೊಬೈಲ್ : 9823690280

## ವೃಶ್ಚಿಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16-11-2017 | ವೃಶ್ಚಿಕ ಸಂಕ್ರಮಣ | 06-12-2017 | ಸಂಕಷ್ಟಹರ ಚತುರ್ಥೀ ಚಂದ್ರೋದಯ ರಾತ್ರಿ 9-05ಕ್ಕೆ |
| 18-11-2017 | ಅಮಾವಾಸ್ಯೆ | 13-12-2017 | ಸರ್ವೈಕಾದಶಿ |
| 19-11-2017 | ಮಾರ್ಗಶಿರ ಮಾಸ ಶುಕ್ಲಪಕ್ಷಾರಂಭ | 15-12-2017 | ಧನು: ಸಂಕ್ರಮಣ |
| 24-11-2017 | ಸುಬ್ರಹ್ಮಣ್ಯ ಷಷ್ಠೀ | 18-12-2017 | ಎಳ್ಳಮಾವಾಸ್ಯೆ |
| 30-11-2017 | ಸರ್ವೈಕಾದಶಿ | 19-12-2017 | ಪೌಷ ಮಾಸ ಶುಕ್ಲಪಕ್ಷಾರಂಭ |
| 03-12-2017 | ಹುಣ್ಣಿಮೆ | | |
| 04-12-2017 | ಮಾರ್ಗಶಿರ ಮಾಸ ಕೃಷ್ಣಪಕ್ಷಾರಂಭ | | |

## ಕಾಸರಗೋಡು ಸಂಘದ ವಾರ್ಷಿಕ ಮಹಾಸಭೆ



ಕಾಸರಗೋಡು ಸ್ಥಾನಿಕ ಬ್ರಾಹ್ಮಣ ಸಭಾದ ವಾರ್ಷಿಕ ಮಹಾಸಭೆ ಮತ್ತು ಜಿಲ್ಲಾ ಸಮಾವೇಶಗಳು ಇತ್ತೀಚೆಗೆ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಾಲಯದ ಸಭಾಂಗಣದಲ್ಲಿ ನಡೆದುವು. ಸಭಾದ ಅಧ್ಯಕ್ಷರಾದ ಶ್ರೀ ಸುಕುಮಾರ ಆಲಂಪಾಡಿಯವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಯಲ್ಲಿ ಕಾರ್ಯದರ್ಶಿ ಶ್ರೀ ವಸಂತರಾಜ ವಿ.ಪಿ. ಮತ್ತು ಮಹಿಳಾ ಘಟಕದ ಕಾರ್ಯದರ್ಶಿ ಶ್ರೀಮತಿ ಪ್ರಭಾ ರಮೇಶ್ ಇವರು ವರದಿಗಳನ್ನು ಮಂಡಿಸಿದರು. ಕೋಶಾಧಿಕಾರಿ ಡಾ। ಎಂ.ಸತ್ಯನಾಥ್ ಮತ್ತು ಮಹಿಳಾ ಘಟಕದ ಕೋಶಾಧಿಕಾರಿ ಶ್ರೀಮತಿ ಸುಮಂಗಲಾ ಮನೋಹರ್ ಇವರು ಲೆಕ್ಕಪತ್ರಗಳನ್ನು ಮಂಡಿಸಿದರು. ಇದೇ ಕಾರ್ಯಕಾರೀ ಸಮಿತಿಯನ್ನೇ ಮುಂದಿನ ಅವಧಿಗೆ ಮುಂದುವರಿಸಲು ತೀರ್ಮಾನಿಸಿ, ಮಹಿಳಾ ಘಟಕಕ್ಕೆ ನೂತನ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಶ್ರೀಮತಿ ಮಾಲತೀ ಜಗದೀಶ್ ಸ್ವಾಗತಿಸಿ, ಶ್ರೀಮತಿ ವಿಜಯಲಕ್ಷ್ಮೀ ಶ್ಯಾನುಭೋಗ್ ವಂದಿಸಿದರು. ಸಂಗೀತ, ನೃತ್ಯ, ಹಾಸ್ಯ ಪ್ರಹಸನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನರಂಜಿಸಿದವು.

ಅಪರಾಹ್ನ ನಡೆದ ಜಿಲ್ಲಾ ಸಮಾವೇಶವನ್ನು ಮಂಗಳೂರಿನ ಕರ್ನಾಟಕ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಉದ್ಘಾಟಿಸಿ ಹಿತವಚನ ನೀಡಿದರು. ಸಭಾದ ಹೆಮ್ಮೆಯ ಸದಸ್ಯ, ಖ್ಯಾತ ವ್ಯಂಗಚಿತ್ರಕಾರ, ಅಂಕಣಕಾರ, ನಾಟಕಕಾರ ಶ್ರೀ ರಾಂ ಎಲ್ಲಂಗಳ ಇವರ ಮಕ್ಕಳ ನಾಟಕಗಳ ಸಂಕಲನ 'ಅಮೃತ ವೃಕ್ಷ'ವನ್ನು ಶ್ರೀ ಸದಾನಂದರಾವ್ ಬೆಳ್ಳೆ ಇವರು ಬಿಡುಗಡೆಗೊಳಿಸಿದರು. ಮಂಗಳೂರಿನ ಪ್ರಸಿದ್ಧ ಉದ್ಯಮಿ, ಸಮಾಜ ಸೇವಕ ಶ್ರೀ ಕರುಣ್‌ರಾವ್ ಬೆಳ್ಳೆ ಸಮಾರೋಪ ಭಾಷಣ ಮಾಡಿದರು. ಆ ಬಳಿಕ ಡಾ। ಕೆ.ಕೆ. ಶ್ಯಾನುಭೋಗ್ (ಸಮಾಜರತ್ನ), ಪ್ರೊ। ಎ.ಶ್ರೀನಾಥ್ ಕೊಲ್ಲಂಗಾನ (ಸಮಾಜ ಸೇವೆ), ಡಾ। ಗೀತಾ ಸತ್ಯನಾಥ್ ಎಂ. (ಸಮಾಜಕೀರ್ತಿ), ಕು। ಗಾಯತ್ರಿ ಬಳಕ್ಕಿಲ (ಕಲಾಪ್ರತಿಭೆ), ಮಾ। ಸುದರ್ಶನ ಬಜಕೂಡ್ಲು (ಲಲಿತಕಲೆ), ಕು। ನಿಹಾರಿಕಾ ಏರಿಕ್ಕಳ (ಚಿತ್ರಕಲೆ ಮತ್ತು ಲಲಿತಕಲೆ) ಮಾ। ಪ್ರಣವ್ ಬಜಕೂಡ್ಲು (ಕ್ರೀಡಾರತ್ನ) ಇವರಿಗೆ ಪ್ರಾಯೋಜಿತ ಪ್ರಶಸ್ತಿಗಳನ್ನು ವಿತರಿಸಲಾಯಿತು. ಕರ್ನಾಟಕ ಸರಕಾರದ 'ಬಾಲ ಚಂದಿರ' ಪುಸ್ತಕ ಪ್ರಶಸ್ತಿ ವಿಜೇತರಾದ ಶ್ರೀ ರಾಂ ಎಲ್ಲಂಗಳ ಇವರಿಗೆ ಸ್ಮರಣಿಕೆಯನ್ನಿತ್ತು ಅಭಿನಂದಿಸಲಾಯಿತು. ಸಮಾಜದ ಹಿರಿಯ ಚೇತನಗಳಾದ ಶ್ರೀಮತಿ ಸರಸ್ವತಿ ಅನಂತಪುರ, ಶ್ರೀ ಲಕ್ಷ್ಮೀನಾರಾಯಣ ರಾವ್ ಅಜ್ಜಾವರ, ಶ್ರೀಮತಿ ಯಶೋದಾ ಉಬರಳೆ ಮತ್ತು ಶ್ರೀಮತಿ ಶಾರದಾ ಉಬರಳೆ ಇವರನ್ನು ಗೌರವಿಸಲಾಯಿತು.

ಎಸ್ಸೆಸ್ಸೆಲ್ಸಿ, ಪಿ.ಯು.ಸಿ., ಪ್ಲಸ್ ಟು ಪರೀಕ್ಷೆಗಳಲ್ಲಿ ಉನ್ನತಾಂಕಗಳನ್ನು ಗಳಿಸಿ ತೇರ್ಗಡೆಯಾದ ಕು। ಮೈತ್ರಿ ಏರಿಕ್ಕಳ, ಕು। ವಿಶಾಖಾ ಎ.ಎಸ್., ಶ್ರೀ ಕೌಶಿಕ್ ಎ.ಕೆ., ಶ್ರೀ ಅನಿಕೇತನ್ ಅಯ್ಯರ್ ಎಂ., ಶ್ರೀ ಅಭಿಷೇಕ್ ಎ.ಅಡೂರು ಬಳಕ್ಕಿಲ ಮತ್ತು ಕು। ಸಂಧ್ಯಾಲಕ್ಷ್ಮಿ ಕೆ. ಕಂಬಾರು ಇವರಿಗೆ ಪ್ರತಿಭಾ ಪುರಸ್ಕಾರ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ವಿತರಿಸಲಾಯಿತು. ವಿವಿಧ ಸಾಂಸ್ಕೃತಿಕ, ಸಾಹಿತ್ಯಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಲಾಯಿತು. ನಿಕಟಪೂರ್ವ ಅಧ್ಯಕ್ಷರಾದ ಡಾ। ಎಂ.ಸತ್ಯನಾಥ್ ಸ್ವಾಗತಿಸಿ, ಕಾರ್ಯದರ್ಶಿ ಶ್ರೀ ವಸಂತರಾಜ ವಿ.ಪಿ. ವಂದಿಸಿದರು. ಶ್ರೀ ರಾಜೇಂದ್ರ ಬಜಕೂಡ್ಲು, ಶ್ರೀ ಮನೋಹರ ಎ. ಮತ್ತು ಶ್ರೀಮತಿ ಪ್ರಭಾ ರಮೇಶ್ ಕಾರ್ಯಕ್ರಮಗಳನ್ನು ಸುಂದರವಾಗಿ ನಿರ್ವಹಿಸಿದರು.

### ಗ್ರಾಮೀಣ ಪ್ರದೇಶದಲ್ಲಿ ಅರಳಿದ ಕಲಾ ಕುಸುಮ

## ಅನಾರು ಎಸ್. ನಾರಾಯಣ ರಾವ್


### ಹಿರಿಯ ಯಕ್ಷಗಾನ ಅರ್ಥಧಾರಿ–ಸಂಘಟಕ



ಶ್ರೀ ಅನಾರು ಎಸ್.ನಾರಾಯಣ ರಾವ್ ಇವರು ಬೆಳ್ತಂಗಡಿ ತಾಲೂಕಿನ ಪಟ್ರಮೆ ಗ್ರಾಮದ ಅನಾರು ಎ.ಎನ್.ಸುಬ್ಬರಾವ್ ಸೀತಮ್ಮ ದಂಪತಿಗಳಿಗೆ 4 ಮಕ್ಕಳಲ್ಲಿ ಮೊದಲನೆಯವರಾಗಿ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು 5ನೇ ತರಗತಿಯಲ್ಲೇ ಮೊಟಕುಗೊಳಿಸಿ ಯಕ್ಷಗಾನ ತಾಳಮದ್ದಳೆಯನ್ನು ಸಂಘಟಿಸುತ್ತಾ ಜೊತೆಯಲ್ಲೇ ಒಬ್ಬ ಅರ್ಥಧಾರಿಯಾಗಬೇಕೆನ್ನುವ ಹಂಬಲದೊಂದಿಗೆ ವೇದಿಕೆ ಏರಿದವರು. ಶರಸೇತುಬಂಧನದ ಕೃಷ್ಣ, ಸಂಧಾನದ ಕೃಷ್ಣ, ಸುಭದ್ರಾರ್ಜುನದ ಬಲರಾಮ, ವೀರಮಣಿಯ ಹನುಮಂತ, ದಕ್ಷಾಧ್ವರದ ಬ್ರಾಹ್ಮಣ, ಕರ್ಣಾರ್ಜುನದ ಶಲ್ಯ ಹೀಗೆ ಅನೇಕ ಪಾತ್ರಗಳು ಆ ಕಾಲದಲ್ಲಿ ಇವರಿಗೆ ಪ್ರಸಿದ್ಧಿಯನ್ನು ತಂದು ಕೊಟ್ಟಿವೆ.

ಅನಾರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಯಕ್ಷಗಾನ ತರಬೇತಿ ಆರಂಭಗೊಂಡು ಅನೇಕ ಕಲಾವಿದರು ರೂಪುಗೊಳ್ಳುವದಕ್ಕೆ ಕಾರಣರಾದವರು, ದೇವಳದ ಜೀರ್ಣೋದ್ಧಾರ ಸಮಿತಿ ಕಾರ್ಯಾದರ್ಶಿಯಾಗಿ, ಅನಾರು ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಎಸ್.ಡಿ.ಎಮ್.ಸಿ ಅಧ್ಯಕ್ಷರಾಗಿ, ಹಲಾವರು ವರ್ಷ ಸೇವೆ ಸಲ್ಲಿಸಿದ್ದರು. ಧರ್ಮಪತ್ನಿ ಶ್ರೀಮತಿ ದಿ। ಪದ್ಮಾವತಿಯಮ್ಮ ಇವರಿಗೆ ಸಹಕಾರಿಣಿಯಾಗಿ ಇವರ ಯಶಸ್ಸಿಗೆ ಕಾರಣರಾಗಿದ್ದರು. ಇವರ 7 ಜನ ಮಕ್ಕಳಲ್ಲಿ ಓರ್ವ ಎ. ರಾಜಾರಾಮ್ ರಾವ್ ಒಬ್ಬ ಯಕ್ಷಗಾನ ಹಿಮ್ಮೇಳ ಕಲಾವಿದನಾಗಿ ಸುಂಕದಕಟ್ಟೆ ಮೇಳ, ಅರುವ, ಅಳದಂಗಡಿ ಮೇಳ, ಬಪ್ಪನಾಡು ಮೇಳಗಳಲ್ಲಿ ಅನೇಕ ವರ್ಷ ತಿರುಗಾಟ ಮಾಡಿದ ಅನುಭವಿ ಕಲಾವಿದರಾಗಿ ಪ್ರಸ್ತುತ ಛಾಯಾಗ್ರಾಹಕರಾಗಿ ಕುಂದಾಪುರವಾಸಿಯಾಗಿದ್ದಾರೆ. ಛಾಯಾಗ್ರಹಣ ವೃತ್ತಿಯಲ್ಲಿ ಇವರ ಕುಟುಂಬದ ಎಲ್ಲಾ ಸದಸ್ಯರು ತೊಡಗಿಸಿಕೊಂಡಿದ್ದಾರೆ. ಇವರ ಓರ್ವ ತಮ್ಮ ಶಶಿಧರ ರಾವ್ ಈ ಹಿಂದೆ ಬೆಳ್ತಂಗಡಿಯಲ್ಲಿ ಶಾಂತಲಾ ಸ್ಟುಡಿಯೋ ಕಲರ್ ಲ್ಯಾಬ್‌ನ್ನು ಹೊಂದಿ ಅನೇಕ ಶಿಷ್ಯ ವರ್ಗವನ್ನು ಈ ಕ್ಷೇತ್ರಕ್ಕೆ ನೀಡಿ ಕೀರ್ತಿಯನ್ನು ಪಡೆದವರು. ಹೀಗೆ ಸಾಮಾಜಿಕವಾಗಿ ಅನಾರು ನಾರಾಯಣ ರಾಯರ ಕೊಡುಗೆಯನ್ನು ಅಕ್ಷರಶಃ ಸ್ಮರಿಸುವ ದಿನ ನಮ್ಮದು. ಇದೇ ಅಕ್ಟೋಬರ್ 11ನೇ ತಾರೀಕಿನಂದು ವಿಧಿವಶರಾಗಿ ಕಲಾಕುಸುಮ ಮುದುಡಿ ನಮ್ಮ ನೆನಪಿನಂಗಳಲ್ಲಿ ಸದಾ ಸ್ಮರಿಸುವಂತೆ ಮಾಡಿದೆ. ಇವರ ಕೀರ್ತಿದಾವಳ್ಯ ಸದಾ ಚಿರಂತನವಾಗಿ ನಮಗೆಲ್ಲಾ ದಾರಿ ದೀಪವಾಗಲಿ ಎಂಬ ಹರಕೆ ಹಾರೈಕೆ ನಮ್ಮದು.

## ಡಾ.ಸತೀಶ್ ರಾವ್ ರವರಿಗೆ ಪ್ರಶಸ್ತಿ



ಮಣಿಪಾಲ ವಿಶ್ವವಿದ್ಯಾಲಯದ ರೇಡಿಯೇಷನ್ ಬಯಾಲಜಿ ಹಾಗೂ ಟಾಕ್ಸಿಕಾಲಜಿ ವಿಭಾಗದ ಮುಖ್ಯಸ್ಥ , ಕಾರ್ಕಳ ಬೋಳ ಸದಾಶಿವರಾವ ರಾವ್‌ರವರ ಪುತ್ರ ಡಾ.ಸತೀಶ್ ರಾವ್ ಪರ್ಕಳರವರು ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್ ಅಕಾಡಮಿಯಿಂದ ನೀಡಲಾಗುವ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ರೂ.50000 ನಗದು ರೂ.20000 ಮೌಲ್ಯದ ಪುಸ್ತಕ ಹಾಗೂ ಫಲಕವನ್ನೊಳಗೊಂಡಿದೆ.

## ವೈವಾಹಿಕ ಜೀವನದ
## 25ನೇ ವಾರ್ಷಿಕೋತ್ಸವದ ಶುಭಾಶಯಗಳು



### ಶ್ರೀ ಚಿತ್ರಾಪುರ ಶಶಿಧರ ರಾವ್ ಮತ್ತು ಶ್ರೀಮತಿ ಸುಕನ್ಯಾ

25 ಸಂವತ್ಸರಗಳನ್ನು ಪೂರೈಸಿದ ನಿಮ್ಮ ವೈವಾಹಿಕ ಬಾಳಿಗೆ
ನಿಮಗಿದೋ ನಮ್ಮ ಅಭಿನಂದನೆಗಳು.

ಶ್ರೀಮತಿ ಉಷಾ ಹಾಗೂ ಶ್ರೀ ಸಿ.ಸುರೇಶ್ ರಾವ್ ಚಿತ್ರಾಪುರ
ಶ್ರೀಮತಿ ಜಯಲಕ್ಷ್ಮಿ ಹಾಗೂ ಶ್ರೀ ಸಿ.ಚಂದ್ರಶೇಖರ್ ರಾವ್ ಚಿತ್ರಾಪುರ
ಶ್ರೀಮತಿ ಶಶಿಕಲಾ ಹಾಗೂ ಶ್ರೀ ಎಸ್. ವಿಜಯ ಕುಮಾರ್ ಸೂಡಾ
ಹಾಗೂ ಬಂಧು ಮಿತ್ರರು .

## ಮಹಾಪೋಷಕರಾಗಿ ಶ್ರೀ ತಂತ್ರಾಡಿ ಶಿವರಾಮ ರಾವ್



ಶ್ರೀ ತಂತ್ರಾಡಿ ಶಿವರಾಮ ರಾವ್‌ರವರು ದಿವಂಗತ ಶ್ರೀ ತಂತ್ರಾಡಿ ಶ್ರೀನಿವಾಸರಾವ್ ಹಾಗೂ ಶ್ರೀಮತಿ ಸೀತಮ್ಮ ದಂಪತಿಗಳ ಎಂಟು ಜನ ಮಕ್ಕಳಲ್ಲಿ ಓರ್ವರು. ಆಂಧ್ರಪ್ರದೇಶದಲ್ಲಿ ಹೋಟೆಲು ಉದ್ಯಮವನ್ನು ಯಶಸ್ವಿಯಾಗಿ ನಿರ್ವಹಿಸಿ ಸದ್ಯ ತಂತ್ರಾಡಿಯಲ್ಲಿ ಪ್ರಗತಿಪರ ಕೃಷಿಕರಾಗಿ ಹೆಸರುಗಳಿಸಿದ್ದಾರೆ. ಇವರು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿರುವ ಶ್ರೀ ರಂಗಯ್ಯ ಶ್ಯಾನುಭಾಗರವರ ಸಹೋದರ. ಇವರ ಇಡೀ ಕುಟುಂಬಕ್ಕೆ ಯಕ್ಷಗಾನ ಕಲೆಯಲ್ಲಿ ಅತೀವ ಆಸಕ್ತಿ ಇದೆ. ಅನೇಕ ಯಕ್ಷಗಾನ ಕಾರ್ಯಕ್ರಮಗಳನ್ನು ಪ್ರಾಯೋಜಿಸಿದ್ದಾರೆ. ಕಲಾವಿದರಿಗೆ ನೆರವು ನೀಡಿದ್ದಾರೆ. ಇತ್ತೀಚೆಗೆ ಶ್ರೀಶಾರದಾಮಂಟಪದಲ್ಲಿ ಜರಗಿದ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರ ದಶಮಾನೋತ್ಸವದಲ್ಲಿ ಕಲಾವೇದಿಕೆಗೆ ಇವರ ಮಾತಾಪಿತರ ಹೆಸರನ್ನಿಟ್ಟು ಸ್ಮರಿಸಿಕೊಳ್ಳಲಾಗಿತ್ತು. ಶ್ರೀಯುತರ ಪತ್ನಿ ಶ್ರೀಮತಿ ಶಾರದಾ. ಮೂವರು ಮಕ್ಕಳು ಹಾಗೂ ನಾಲ್ವರು ಮೊಮ್ಮಕ್ಕಳ ಸುಖೀ ಸಂಸಾರ. ಶ್ರೀ ಶಾರದಾ ಪತ್ರಿಕೆಗೆ ಮಹಾಪೋಷಕರಾಗಿ ಪ್ರೋತ್ಸಾಹಿಸಿರುವ ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗರಿಗೆ ಶ್ರೀ ಶಾರದೆಯ ಅನುಗ್ರಹ ಸದಾಕಾಲ ಇರಲಿ ಎಂದು ಪ್ರಾರ್ಥಿಸುತ್ತೇವೆ.

## ದಿ| ಶ್ರೀ ಯು.ಎಸ್. ಕೃಷ್ಣರಾಯರ 103ನೇ ವರ್ಷದ ಸಂಸ್ಮರಣೆ ಹಾಗೂ ಸಂಸ್ಥೆಯ 82ನೇ ವಾರ್ಷಿಕೋತ್ಸವ



ಪಂದನಲ್ಲೂರು ಭರತನಾಟ್ಯ ಶೈಲಿಯ ಪರಮೋಚ್ಚ ಗುರುಗಳಾದ ‘ನಾಟ್ಯರಾಣಿ ಶಾಂತಲಾ ಪುರಸ್ಕೃತ’ ನಾಟ್ಯ ಪಿತಾಮಹ ದಿ| ಶ್ರೀ ಯು.ಎಸ್. ಕೃಷ್ಣರಾಯರಿಂದ 82 ವರುಷಗಳ ಹಿಂದೆ ಸಂಸ್ಥಾಪಿಸಲ್ಪಟ್ಟ ಕದ್ರಿ ನೃತ್ಯವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್‌ನ 82ನೇ ವಾರ್ಷಿಕೋತ್ಸವ ಹಾಗೂ ಸ್ಥಾಪಕ ದಿ| ಶ್ರೀ ಯು.ಎಸ್. ಕೃಷ್ಣರಾವ್ ಇವರ 103ನೇ ವರುಷದ ಸಂಸ್ಮರಣೆಯನ್ನು ಸಂಸ್ಥೆಯ ನಿರ್ದೇಶಕರಾದ ‘ನಾಟ್ಯವಿಶಾರದ’, ‘ಗುರುಕುಲಭೂಷಣ’ ವಿದ್ವಾನ್ ಶ್ರೀಯು.ಕೆ. ಪ್ರವೀಣ್‌ರವರು ಪ್ರಥಮ ದಿನವಾದ ತಾ.28.09.2017 ರಂದು ಸಂಗೀತೋತ್ಸವದ ಮೂಲಕ ನೃತ್ಯ ವಿದ್ಯಾನಿಲಯದ ಸಭಾಂಗಣದಲ್ಲಿ ಆಚರಿಸಿದರು. ಈ ಕಾರ್ಯಕ್ರಮವು ಡಾ| ಮಚ್ಚೇಂದ್ರನಾಥ್ ಪಾಂಡೇಶ್ವರ ಇವರ ಶಿಷ್ಯೆ ಕು| ದುರ್ಗಾಶ್ರೀ ಇವರ ಸ್ಯಾಕ್ಸೋಫೋನ್ ವಾದನ ಹಾಗೂ ವಿದ್ವಾನ್ ರಾಜೇಶ್ ಬಾಗಲೊಡಿ ಇವರ ಶಿಷ್ಯೆ ಕು| ಸಿಂಚನ ಅಡಿಗ ಇವರ ಕೊಳಲು ವಾದನದೊಂದಿಗೆ ಪ್ರಾರಂಭಗೊಂಡಿತು. ನಂತರ ಸಂಸ್ಥೆಯ ಸಂಗೀತ ಗುರುಗಳಾದ ಶ್ರೀಮತಿ ಉಷಾ ಪ್ರವೀಣರ ಸುಮಾರು 150 ಶಿಷ್ಯಂದಿರು ಸುಮಾರು 2 ಗಂಟೆಗಳ ಕಾಲ ಶಾಸ್ತ್ರೀಯ ಸಂಗೀತ ಹಾಗೂ ಲಘು ಸಂಗೀತಗಳನ್ನು ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದ ನಂತರ ಕದ್ರಿ ನೃತ್ಯ ವಿದ್ಯಾನಿಲಯ ಮನೆತನದವರು ಸುಮಾರು 150 ವರುಷಗಳಿಂದ ನವರಾತ್ರಿ ಸಂದರ್ಭದಲ್ಲಿ ಪೂಜಿಸಿಕೊಂಡು ಬರುತ್ತಿದ್ದ ಶಕ್ತಿ ಗೊಂಬೆಗಳಿಗೆ ಮಹಾಪೂಜೆಯಾಗಿ ಭಕ್ತರಿಗೂ ಕಲಾಭಿಮಾನಿಗಳಿಗೂ ಪ್ರಸಾದನನ್ನು ವಿತರಿಸಿದರು. ತಾ.29.09.2017ರಂದು ಸಂಸ್ಥೆಯ ನೃತ್ಯೋತ್ಸವವು ಮಂಗಳೂರಿನ ನಾಟ್ಯ ವಿದುಷಿ ಡಾ| ವಿಜಯಲಕ್ಷ್ಮೀ ಸುಬ್ರಹ್ಮಣ್ಯಂ, ಎಂ.ಎ. ಮ್ಯೂಸಿಕ್ (ತಂಜಾವೂರು ಮಹಾ ವಿದ್ಯಾಲಯ) ಇವರ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದೊಡನೆ ಪ್ರಾರಂಭಗೊಂಡಿತು. ನಂತರ ವಿದ್ಯಾನಿಲಯದ ಸುಮಾರು 150 ವಿದ್ಯಾರ್ಥಿ ವಿದ್ಯಾರ್ಥಿನಿಯರು ಗುರುಗಳಾದ ವಿದ್ವಾನ್ ಯು.ಕೆ. ಪ್ರವೀಣರ ಮಾರ್ಗದರ್ಶನದಲ್ಲಿ ‘ಭರತನಾಟ್ಯ ಮಾಗ’ ಪದ್ಧತಿಯ ನೃತ್ಯಗಳನ್ನು, ಲಘು ಶಾಸ್ತ್ರೀಯ ಹಾಗೂ ಜಾನಪದ ನೃತ್ಯಗಳನ್ನು ಪ್ರದರ್ಶಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹ ಅಧ್ಯಾಪಕರಾದ ವಿದ್ವಾನ್ ಶ್ರೀ ಯು.ಪಿ. ಶರಣ್, ವಿದ್ವಾನ್ ಶ್ರೀ ಯು.ಪಿ ಚಂದನ್ ಹಾಗೂ ವಿದುಷಿ ಶ್ರೀಮತಿ ನಿಷ್ಠಿತಾ ಶರಣ್ ಉಪಸ್ಥಿತರಿದ್ದರು. ಸುಧಾಕರ್ ರಾವ್ ಪೇಜಾವರ ಇವರು ಕಾರ್ಯಕ್ರಮವನ್ನು ನಿರ್ವಹಿಸಿದ್ದರು.




*With Best Compliments from :*

**Dr. Sanath S. Rao**

M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)


## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ “ದೀಪಾವಳಿ ಆಚರಣೆ”



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.22–10–2017ರಂದು ದೀಪಾವಳಿಯನ್ನು ಆಚರಿಸಲಾಯಿತು. ಶ್ರೀಮತಿ ಉಷಾ ನಟರಾಜ ರವರ ದೀಪ ಸ್ತುತಿಯೊಂದಿಗೆ ದೀಪ ಪ್ರಜ್ವಲನೆ ಬಳಿಕ ಕು. ಐಶ್ವರ್ಯಲಕ್ಷ್ಮೀ ಪ್ರಾರ್ಥನೆ ಹಾಡಿದರು. ನಂತರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸ್ವಾಮಿಗಳ ದೀಪಾವಳಿ ಅನುಗ್ರಹ ಸಂದೇಶವನ್ನು ಆಲಿಸಲಾಯಿತು. ಶ್ರೀ ಸೋಮಶೇಖರನ್‌ರವರು “ದೀಪಾವಳಿ ಆಚರಣೆ ಮತ್ತು ಮಹತ್ವ”ದ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಸಂಜಯ ಕುಮಾರ್ ಪಿ. ದೀಪಾವಳಿಯ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀಮತಿ ಸ್ವಾತಿ ಪ್ರಮೋದ್ ಅವರಿಂದ ದೀಪಾವಳಿ ಹಾಡು, ಶ್ರೀಮತಿ ಸ್ನೇಹಲತಾ ದಿವಾಕರ್‌ರಿಂದ ಕವನ ವಾಚನ, ಕು. ಪ್ರಾರ್ಥನಾ ರಾವ್, ಅಶ್ವಿನ್ ಕುಮಾರ್ ರಿಂದ ನೃತ್ಯ ಪ್ರದರ್ಶನ ನಡೆಯಿತು. ಕದ್ರಿ ನೃತ್ಯ ವಿದ್ಯಾನಿಲಯದ ಶ್ರೀ ಶರಣ್ ಮತ್ತು ಶ್ರೀಮತಿ ನಿಶ್ಮಿತಾ ಶರಣ್ ರವರು “ಪದವರ್ಣ” ಭರತನಾಟ್ಯ ರೂಪಕವನ್ನು ಪ್ರಸುತ ಪಡಿಸಿದರು. ವಿನೋದಾತ್ಮಕ ಆಟಗಳನ್ನು ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್ ಕುಮಾರ್ ಮತ್ತು ಡಾ. ಜಯಲಕ್ಷ್ಮೀ ನಡೆಸಿದರು. ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ಸುಡುಮದ್ದು ಪ್ರದರ್ಶನ, ಸಾಮೂಹಿಕ ನೃತ್ಯದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ನಾಗರಾಜ್ ಶರ್ಮಾ ಮತ್ತು ಶ್ರೀ ರಘುವೀರ್ ರಾವ್ ದೀಪದ ಸುತ್ತ ಆಕರ್ಷಕ ರಂಗೋಲಿ ರಚಿಸಿದರು.

ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ನಿರೂಪಿಸಿದರೆ, ಯುವ ವೇದಿಕೆಯ ಶ್ರೀ ಸುರೇಶ ಕಡಬ ಮತ್ತು ಶ್ರೀ ಅನಿಲ್ ನೆಲ್ಲಿಕುಂಜೆ ವ್ಯವಸ್ಥೆಗಳಲ್ಲಿ ಸಹಕರಿಸಿದರು.

## ಚಿಣ್ಣರ ಅಂಗಳ

### RIDDLES

1. Which chief is not good?
   A : Mischief
2. Why did boy take ladder to school?
   A : Beacuse he want to go higher school.
3. Why is six afraid of seven?
   A : Because seven, eight, nine (seven ate nine)
4. Scientists are trying to find what is between heaven and earth?
   A : and
5. I come one time in minute. 2 times in moment but never in year.
   A : letter 'M'
6. What is the centre of the "gravity"?
   A : The letter 'V'

### AVERAGE AGES OF ANIMALS AND BIRDS

| | | | | | |
|---|---|---|---|---|---|
| Black Bird | : 12 years | Horse | : 85 years | Sheep | : 10 years |
| Camel | : 45 years | Hen | : 10 years | Pigeon | : 10 years |
| Cat | : 20 years | Lion | : 40 years | Sparrow | : 10 years |
| Cow | : 25 years | Parrot | : 25 years | Goat | : 10 years |
| Dog | : 20 years | Pig | : 10 years | Tortoise | : 10 years |
| Elephent | : 80 years | Rabbit | : 10 years | Blue whale | : 10 years |

**-ROHIT**, 8th Std, St.Antony's English, Medium School Sastan


**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org